ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನವೀಯ ದೃಷ್ಟಿಯಿಂದ ಅವರುಗಳನ್ನು ಸೇವೆಯಲ್ಲಿ ಉಳಿಸಿಕೊಳ್ಳುವ ಹಾಗೆ ಮಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ: ಆ ಸಲಹೆಯನ್ನು ತಾವು ಕೊಟ್ಟಿದ್ದೀರಿ. ಅದನ್ನು ಡೆಫನೇಟ್‌ಲಿ ಸರ್ಕಾರ ಗಮನದಲ್ಲಿ ಇಟ್ಟುಕೊಳ್ಳುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲಿ ಭರವಸೆಯನ್ನೂ ಕೊಟ್ಟಿದ್ದರು.

ಶ್ರೀ ಎಸ್.ಎಸ್.ಪಾಟೀಲ್: ಅದರ ಮೇಲೆಯೇ ಮಾನ್ಯ ನಾಡಗೌಡರದ್ದು ಸ್ಟಾರ್ಡ್ ಕ್ವೊಶ್ಚನ್ ರೂಪದಲ್ಲಿ ಬಂದಿದೆ.

2. ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ (ಬೇಡಿಕೆಗಳ ಸಂಖ್ಯೆ 9,18,6,16 ಮತ್ತು 10)

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಯ ಮೇಲೆ ಚರ್ಚೆ ನಡೆಯುವ ಕಾಲದಲ್ಲಿ ನಾನು ಭಾಗವಹಿಸಬಾರದು ಎಂದು ಇದ್ದೆ. ಏಕೆಂದರೆ ಶಿಕ್ಷಣ ಇಲಾಖೆಯ ಮೇಲೆ ನಾನು ಬಹಳ ಸಮಯವನ್ನು ತೆಗೆದುಕೊಂಡಿದ್ದೆ. ಎರಡು – ಮೂರು ಸಲಹೆಗಳನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ. ಈಗ ಸೊಸೈಟಿ ಚುನಾವಣೆಗಳನ್ನೆಲ್ಲಾ ಸನ್ಮಾನ್ಯ ದೇಶಪಾಂಡೆಯವರು ಮಂತ್ರಿಗಳಾದ ಮೇಲೆ ಮಾಡಿದರು. ನಾವು ಕೇಳಿ ಕೊಂಡಿದ್ದೆವು. ನೀವು ಒಂದು ಸಲ ಈ ಸ್ಕೀಮ್ ಈ ಇಂಟರೆಸ್ಟ್ ವೇವ್ ಮಾಡುವ ಸ್ಕೀಮ್ ಅಥವಾ ಪೀನಲ್ ಇಂಟರೆಸ್ಟ್ ಸೇವೆ ಮಾಡುವ ಸ್ಕೀಮ್ ಆದಮೇಲೆ ಮಾಡಿದ್ದರೆ ಪಾರ್ಟಿಸಿಪೇಷನ್ ಜಾಸ್ತಿ ಇರುತ್ತೇ ಎಂದು Sir, Main the Principle in Co-Operation is Paticipation ಎಂದು ಅವರು ಟ್ರೈನಿಂಗ್‌ನಲ್ಲಿ ಹೇಳಿಕೊಡುವುದು. ಇಡೀ ಸೊಸೈಟಿಗಳು ಶೇಕಡ 5 ರಿಂದ 10 ಪರ್‌ಸೆಂಟ್ ಸದಸ್ಯರನ್ನು ಒಳಗೊಂಡು ಚುನಾವಣೆಗಳನ್ನು ಮಾಡಿದೆ. ಲೋನಿಗಳು ಮಾತ್ರ ವೋಟನ್ನು ಹಾಕಬೇಕೆಂದು ಹೇಳಿ. ಅದನ್ನು ಮಾಡಬೇಕಾದರೆ ಒಂದೇ ಒಂದು ನ್ಯೂನತೆಯನ್ನು ಅವರಿಗೆ ಗುರುತು ಮಾಡಿ ಹೇಳುತ್ತೇನೆ. ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ನೀವೇನು ಶೇರನ್ನು ಇಲ್ಲಿಂದ ಸರ್ಕಾರದಿಂದ ತುಂಬಿದ್ದಿರಿ, ಅವರ ಶೇರನ್ನು ಎನ್‌ಹ್ಯಾನ್ಸ್ ಮಾಡಬೇಕಾದರೆ ಅವರು ಗೌರ್ನಮೆಂಟ್‌ಗ್ ಬರೆಯಲಿಲ್ಲ. ಗೌರ್ನಮೆಂಟ್ ಆಸಕ್ತಿ ತೆಗೆದುಕೊಂಡು ಆ ಶೇರನ್ನು ಎನ್‌ಹ್ಯಾನ್ಸ್ ಮಾಡಿಕೊಡಲಿಲ್ಲ. ನೂರು ರೂ.ಹತ್ತು ರೂ.ಇದ್ದುದು 250 ರೂ, 500 ರೂ. ಎಂದು ಮಾಡಿಕೊಂಡುಬಿಟ್ಟರು. ಒಬ್ಬನೇ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲಿಕ್ಕೆ ಈ ಸಲ ಅವಕಾಶವನ್ನು ಕೊಡಲಿಲ್ಲ. ಇದೊಂದು ದೊಡ್ಡ ಪಿತೂರಿ.

ಎರಡನೆಯದು ಈಗಲೂ ನಾನು ನಿಮಗೆ ಡಿಮ್ಯಾಂಡ್ ಮಾಡುತ್ತೇನೆ. ದಯಮಾಡಿ ಬಾರೋಯಿಂಗ್‌ಗೂ ಪಾರ್ಟಿಸಿಪೇಷನ್‌ಗೆ ಇರುವ ಸಂಬಂಧವನ್ನು ತಾವು ತೆಗೆದುಹಾಕಬೇಕು. ಯಾರು ಡಿಫಾಲ್ಟರ್ ಆಗಿರುತ್ತಾರೆ. ಅವರೇನು ವೋಟನ್ನು ಹಾಕಬಾರದೆಂದು ಇಟ್ಟಿದ್ದೀರಿ, ಅಥವಾ ಯಾವ ಸೊಸೈಟಿ ಇಷ್ಟು ಪರ್‌ಸೆಂಟ್ ರಿಕವರಿ ಮಾಡಿದರೆ ಮಾತ್ರ ಎಲೆಕ್ಷನ್‌ನಲ್ಲಿ ಇರಬೇಕೆಂದು ಇಟ್ಟಿದ್ದೀರಿ, ಇದನ್ನು ದಯಮಾಡಿ ತೆಗೆಯಬೇಕು. ಅವರೇ ಸೊಸೈಟಿಯನ್ನು ನಡೆಸುತ್ತಾರೆ. ಎಂಬ ಭಾವನೆ ಇದೆ. ಆದರೆ ಸಾವಿರ ಜನ, 1200 ಜನ ಸಹಕಾರ ಸಂಘಗಳಲ್ಲಿ ಸದಸ್ಯರುಗಳು ಇದ್ದರೆ ಹತ್ತು ಜನ, ಇಪ್ಪತ್ತು ಜನ ನನ್ನ ತಾಲ್ಲೂಕಿನಲ್ಲಿ ಅನೇಕ ಸೊಸೈಟಿಗಳಿಗೆ ನಾಮಿನೇಷನ್ ಫೈಲ್ ಮಾಡುವುದಕ್ಕೆ ಜನರು ಸಿಕ್ಕಿಲ್ಲ ಸಾರ್. ಸೆಕೆಂಡ್ ಮಾಡುವುದಕ್ಕೆ ಜನರು ಸಿಕ್ಕಿಲ್ಲ. ಇವತ್ತು ಪ್ರಪೋಸರ್ಸ್ ಇಲ್ಲ. ಇವತ್ತು ಅನೇಕ ಸೊಸೈಟಿಗಳಲ್ಲಿ ಆ ರೀತಿಯಾಗಿದೆ. 9 ಜನರನ್ನು ನೀವು ಎಲೆಕ್ಟ್ ಮಾಡುವ ಕಡೆ ಹತ್ತು ಜನರನ್ನು ಪ್ರಪೋಸರ್ಸ್ ಕೇಳಿದರೆ ಅಷ್ಟು ಜನರು ಇಲ್ಲದೇನೇ ಸೊಸೈಟಿಗಳಲ್ಲಿ ಎಲೆಕ್ಷನ್ ಕಂಪ್ಲೀಟ್ ಆಗದ ಸ್ಥಿತಿಗೆ ಬಂದಿವೆ. ಮೂರನೆಯದು, If a vacancy arises at the time of filing Nomination, ಏನು ಮಾಡಬೇಕೆಂದು ನೀವು ಕಾಯ್ದೆಯಲ್ಲಿ ಹೇಳಿಲ್ಲ. ಈಗ ನನ್ನ ಸೊಸೈಟಿಯಲ್ಲಿ 9 ಜನರು ಗೆಲ್ಲಬೇಕು. 4 ಜನರು ನಾಮಿನೇಷನ್ ಫೈಲ್ ಮಾಡಿ ಅವಿರೋಧವಾಗಿ ಆಯ್ಕೆಯಾಗುತ್ತಾರೆ. ಇನ್ನು 5 ಜನ ಇಲ್ಲ. ಆ ಸೊಸೈಟಿಯ ಗತಿಯೇನು ಎಂದು ನೀವೇನಾದರೂ ಕಾಯ್ದೆಯಲ್ಲಿ ಹೇಳಿದ್ದೀರಾ? Your Act is silent. ಸೊಸೈಟಿಗಳನ್ನು ನಡೆಸುವುದು ಹೇಗೆ? ನೀವೇನಾದರೂ ಮಾಡಬೇಕೆಂದರೆ ಇಂಥ ಲ್ಯಾಪ್ಸಸ್‌ಗಳನ್ನು ಹುಡುಕಬೇಕು. ಹತ್ತು ಜನರು ನಾಮಿನೇಷನ್ ಪೇಪರ್‌ಗೆ ಫೈಲ್ ಮಾಡಬೇಕೆನ್ನುತ್ತೀರಿ. ಕೆಲವು ರಿಟರ್ನಿಂಗ್ ಆಫೀಸರ್ಸ್ 9 ಜನಕ್ಕೂ ಹತ್ತು ಜನರು ಸೈನ್ ಹಾಕಬೇಕೆನ್ನುತ್ತಾರೆ. ಇನ್ನು ಕೆಲವರು ರಿಟರ್ನಿಂಗ್ ಆಫೀಸರ್ಸ್ ಇಲ್ಲ, ಒಬ್ಬರಿಗೆ ಸಹಿ ಮಾಡಿದವರು ಇನ್ನೊಬ್ಬರಿಗೆ ಸಹಿಯನ್ನು ಮಾಡಬಾರದು ಎಂದು ಹೇಳುತ್ತಾರೆ. ಈ ದೋಷ ಏನಿದೆ, ಇದನ್ನು ತೆಗೆಯಬೇಕು. When I am entitled and eligible to vote 5, I am eligible to propose 5. I am eligible to sign 5 nominations. ಇದು ಅನೇಕ ಕಡೆ ಇಲ್ಲದಂತೆ ಮಾಡಿ ರೆಪ್ರೆಸೆಂಟೇಷನ್‌ನ್ನು ಇವತ್ತು ಇಲ್ಲದಂತೆ ಮಾಡಿದ್ದಾರೆ. ಒಬ್ಬರಿಗೆ 9 ಜನರಿಗೆ ಹತ್ತು ಜನರು ಸಹಿ ಹಾಕಬೇಕೆಂದರೆ ಇವತ್ತು 90 ಜನರು ನಿಮ್ಮ ಸೊಸೈಟಿಗಳಲ್ಲಿ ಎಲಿಜಬಲ್ ವೋಟರ್ಸ್ ಇಲ್ಲ. ದಯಮಾಡಿ ತಾವು ನೋಡಬೇಕು. ನಾನು ತಿಳಿದುಕೊಂಡಿದ್ದೇನೆ. ತಾವು ರಾಜಕೀಯ ಕಾರಣ

ನಿಮ್ಮದೇನೊ ಒತ್ತಡ ಬಂತು ಎಂದು ಹೇಳಿ. 75 ಪರ್‌ಸೆಂಟ್ ಇದ್ದುದನ್ನು 30–35 ಪರ್‌ಸೆಂಟ್‌ಗೆ ಇಳಿಸಿದಿರಿ. ಅದನ್ನು ನೂರು ಪರ್‌ಸೆಂಟ್‌ಗೂ ಇಳಿಸಿಬಿಡಬೇಕಾಗಿತ್ತು. ಯಾರ್‍ಯಾರು ಶೇರ್‌ಹೋಲ್ಡರ್ ಇದ್ದಾರೆ. ಎಲ್ಲಾ ಬಂದು ಬೋರ್ಡ್ ಆಫ್ ಡೈರೆಕ್ಟರ್ ಅನ್ನು ಎಲೆಕ್ಟ್ ಮಾಡಿಬಿಡಲಿ. ಆಮೇಲೆ ಸೊಸೈಟಿಯ ಆರೋಗ್ಯವನ್ನು ಚೆನ್ನಾಗಿ ನೋಡಿಕೊಂಡು ಹೋಗಲಿ ಅಂತ ಎರಡನೆಯದು ನಾವು ಬೇಡಿಕೆಗಳನ್ನು ಇಡುವ ಕಾಲದಲ್ಲಿ ಹೇಳಿದ್ದೆವು. ಸೊಸೈಟಿಗಳು ಸಾಲ ಮನ್ನಾ ಮಾಡಬೇಕಾದರೆ ಅನೇಕ ಕ್ಷೇತ್ರಗಳನ್ನು ಕೈಬಿಟ್ಟಿದ್ದೀರಿ. ನಾನು ಮತ್ತೊಮ್ಮೆ ಇಲ್ಲಿ ನಿಮ್ಮನ್ನು ಡಿಮ್ಯಾಂಡ್ ಮಾಡುತ್ತಿದ್ದೇನೆ. ರೈತರೇ ಮಾಡುವ ಕೆಲಸ. ತೆಂಗಿನ ಬೆಳೆ ಅಭಿವೃದ್ಧಿಗೆ ಸಾಲ ತೆಗೆದುಕೊಂಡಿದ್ದಕ್ಕೆ ಮನ್ನಾ ಮಾಡುವುದಿಲ್ಲ. ಕೋಳಿ ಎಂದು ತೆಗೆದುಕೊಂಡಿದ್ದಕ್ಕೆ ಮಾಡುವುದಿಲ್ಲ. ಫಾರಂ ಹೌಸ್ ಕ್ಯಾಟಲ್ ಷೆಡ್‌ಗೇ ಮಾಡುವುದಿಲ್ಲವೆಂದು ಹೇಳಿದ್ದೀರಿ, ಮತ್ತೊಮ್ಮೆ ತಾವು ಸಿದ್ದರಾಮಯ್ಯನವರ ಹತ್ತಿರ ಕೂತು ಚರ್ಚೆಮಾಡಬೇಕು. ಇದನ್ನು ನೀವೇನಾದರೂ ಮಾಡಿ ತರಬೇಕು. ಮೂರನೆಯದು, ಈ ನಾಮಿನೇಷನ್ ವ್ಯವಸ್ಥೆಯನ್ನು ನೀವು ಬಿಡಬೇಕು. ಮಾನ್ಯ ದೇಶಪಾಂಡೆಯವರೇ, ಎಲ್ಲರಿಗೂ ಇರುತ್ತದೆ, ನಾಮಿನೇಷನ್ ಮಾಡಬೇಕು ಎಂದು. 'ಏನು ನಾಮಿನೇಷನ್ ಮಾಡಿದರು ಯಾರೂ ಮತ್ತೆ ಸರ್ಕಾರಗಳನ್ನು ಮತ್ತೆ ಗೆಲ್ಲಿಸಿ ಇಲ್ಲಿಗೆ ಕಳುಹಿಸಿಲ್ಲ. ನಾಮಿನೇಷನ್ ಮಾಡಿದ ಎಂಎಲ್‌ಎಗಳೇನೂ ಮತ್ತೆ ನಾವು ಯಾರೂ ಇಲ್ಲಿ ಗೆದ್ದುಬಂದಿಲ್ಲ. ನಾವೆಲ್ಲಾ ನಾಮಿನೇಷನ್ ಕೊಡಿಸಿ ಸೋತಿರುವವರೇ. ಒಂದು ಸಂಘ ಚುನಾಯಿತ ಸದಸ್ಯರ ಅಧೀನದಲ್ಲಿ ನಡೆಯುವುದಕ್ಕೆ 'ಏಕೆ ನೀವು ಬಿಡುವುದಿಲ್ಲ? 9 ಜನ ಮಾಡಿರುತ್ತೀರಿ. ನೀವು ನಾಮಿನೇಷನ್ ಮಾಡಿದರೆ 5 ಜನ, 6 ಜನ ಗೆದ್ದಿರುವವರು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುತ್ತಾರೆ. 3 ಜನ ಗೆದ್ದಿರುವವರು, ಇನ್ನೂ 3 ಜನರು ಜೊತೆ ಸೇರಿಕೊಂಡು ಆಡಳಿತ ಮಾಡುತ್ತಾರೆ. ಇದಕ್ಕೆ ಎಲೆಕ್ಷನ್‌ಗಳನ್ನು ಮಾಡಬೇಕಾ? ಮಾಡುವುದೇ ಆದರೆ ಎಂಟೈರ್ ಬೋರ್ಡ್ ಅನ್ನು ನಾಮಿನೇಟ್ ಮಾಡಿ ಬಿಡಿ. ಎಲೆಕ್ಷನ್ ಬೇಡ. ತಮಿಳುನಾಡು ಪ್ಯಾಟ್ರನ್ ಅನ್ನು ಅನುಸರಿಸಿ ಬಿಡಿ. ಇಡೀ ಬೋರ್ಡಿಗೆ ನಾಮಿನೇಷನ್ ಮಾಡಿ ನಿಮ್ಮ ಸರ್ಕಾರ ಇರುವವರೆಗೂ ಅದನ್ನು ನಿಮ್ಮ ಸಂಘಗಳನ್ನಾಗಿ ಮಾಡಿಕೊಂಡು ಬಿಡಿ. ಚುನಾಯಿತ ಸಂಘಗಳು ಎಂದು ಕರೆಯುವುದು, ಎಲೆಕ್ಷನ್ ಮಾಡುವುದು, ಹೊಡೆದಾಡಿಸುವುದು, ಇವೆಲ್ಲಾ ಅಗತ್ಯ ಸಾರ್, ಕೋಆಪರೇಟಿವ್ ಸೊಸೈಟಿಗಳಿಗೆ. ಒಂದು ಸಲ ಇವರು ಅಧ್ಯಕ್ಷರು, ಇವರು ಡೈರೆಕ್ಟರ್‌ಗಳು ಇಲ್ಲ ಎಂದು ಇಲ್ಲಿಂದಲೇ ನಾಮಿನೇಷನ್ ಕಳುಹಿಸಿ ಬಿಡಿ. ತಮಿಳುನಾಡಿನಲ್ಲಿ ಈ ರೀತಿ ಒಂದು ಹತ್ತು ವರ್ಷ ಹದಿಮೂರು ವರ್ಷ

ಸಹಕಾರ ಸಂಘಗಳು ಹೀಗೆ ನಡೆಯಿತು. ಅವರು ಸೌತ್‌ನಲ್ಲಿ ಬೆಸ್ಟ್ ಗವರ್ನಡ್ ಸ್ಟೇಟ್. ಅದನ್ನೇ ನೀವು ಅನುಕರಣೆಗೇ ತೆಗೆದುಕೊಳ್ಳಿ. ಏಕೆಂದರೆ ನಿಮಗೆ ಸಂಘಗಳು ಬೇಕಲ್ಲ. ಅವನ್ನೇ ಇಟ್ಟುಕೊಂಡು ಬಿಡಿ. ಇನ್ನು ಯೂನಿಯನ್‌ಗಳಿಗೆ ಫೆಡರೇಷನ್, ಅಥವಾ ಡಿಸ್ಟ್ರಿಕ್ಟ್ ಲೆವಲ್ ಸೊಸೈಟಿಗಳಿಗೆ ಕನಿಷ್ಟ 15 ದಿವಸನೋ ಅಥವಾ ತಿಂಗಳೋ ಟೈಮ್ ಕೊಟ್ಟು ನೀವು ಚುನಾವಣೆ ಮಾಡಬೇಕಾಗಿತ್ತು.

ಶ್ರೀ ಆರ್.ವಿ.ದೇಶಪಾಂಡೆ: ಟೈಮ್ ಕೊಟ್ಟಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನೋ ನೋ. ಈ ಸಲ ನೀವೇನು ಮಾಡಿದ್ದೀರಿ? Out – going Board has delegated a member to the apex body. ನಾವು ವಿ.ಎಸ್.ಎಸ್.ಎನ್. ನಲ್ಲಿ ನಾಳೆ ಎಲೆಕ್ಷನ್ ಇದೆ ಎನ್ನುವಾಗ ಹಿಂದಿನ ದಿವಸ ರೆಸುಲೂಷನ್ ಪಾಸ್ ಮಾಡಿ ಡಿಸಿಸಿ ಬ್ಯಾಂಕ್‌ಗೆ ಓಟು ಹಾಕಿದ್ದೇವೆ. ಇವತ್ತೇನು ನಿಮ್ಮ ಬೋರ್ಡ್ ಬಂದಿದೆ, It is not responsible for the DCC Bank Board. ಇದನ್ನೂ ಮಾನ್ಯ ಗುರುಪಾದಪ್ಪನವರು ಒಪ್ಪುತ್ತಾರೆ. ಆಚೆ ಹೋಗುವ ಬೋರ್ಡ್ ನಾಮಿನೇಟ್ ಮಾಡಿ ಬಿಟ್ಟಿದೆ. ಆಚೆ ಹೋಗುವ ಬೋರ್ಡ್ ಡೆಲಿಗೇಟ್ ಕಳುಹಿಸಿ ಹೋಗಿದೆ. ಮೊದಲನೇ ಹಂತದಲ್ಲಿ ಸೊಸೈಟಿ ಎಲೆಕ್ಷನ್ ಮುಗಿಸಿ, ಎರಡನೇ ಹಂತ ಹದಿನೈದು ದಿವಸವೋ ತಿಂಗಳೋ ಆದ ಮೇಲೆ ಜಿಲ್ಲಾ ಮಟ್ಟದ್ದು. ಅದಾದ ಒಂದು 15 ದಿವಸ ಆದಮೇಲೆ ರಾಜ್ಯಮಟ್ಟದ್ದು ಇಟ್ಟಿದಿದ್ದರೆ ಸರಿ ಇರೋದು, ಅವನ ಎಲಿಜೆಬಲಿಟಿನೇ ಅವನು ಬೋರ್ಡ್‌ನಲ್ಲಿ ಇದ್ದ ಎಂದು, ಆದರೆ ಸಂಘದಲ್ಲಿ ಅವನು ಸೋತಿರುತ್ತಾನೆ. What will you do with that man?ಯಾರೂ ರೆಪ್ರೆಸೆಂಟ್ ಮಾಡುತ್ತಿದ್ದಾರೆ. He is not existing in the Board ಅವನನ್ನು ಆ ಸೊಸೈಟಿ ಬೋರ್ಡ್‌ನಲ್ಲಿಯೇ ಎತ್ತಿ ಹಾಕಿರುತ್ತಾರೆ. ಇಂಥವರು ಅಪೆಕ್ಸ್ ಇನ್ಸ್ಟಿಟ್ಯೂಷನ್ಸ್‌ಗೆ ಬೋರ್ಡನ್ನು ರಚಿಸಿ ಬಿಟ್ಟಿದ್ದಾರೆ. ತಾವು ದಯಮಾಡಿ ಕೇರ್ ತೆಗೆದುಕೊಳ್ಳಬೇಕು. ಈ ಸಲ ಬಂದ ಬೋರ್ಡು ಇಲ್ಲಿಂದ ಐದು ವರ್ಷಕ್ಕೆ ಇರುವಂತಹ ಕೋಅಪರೇಟಿವ್ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಇರಬೇಕಾಗುತ್ತದೆ. ಆಚೆ ಹೋಗುವವನಿಗೆ ನೀವು ಹೀಗೆ ಒಟು ಹಾಕುವುದಕ್ಕೆ, ಡೆಲಿಗೇಟ್ ಕಳುಹಿಸಲಿಕ್ಕೆ ಬರೆಯುವುದಕ್ಕೆ ಬಿಟ್ಟು ಹೋದರೆ ಹೇಗೆ? ಮೂರನೆಯದು ಈ ಪುಸ್ತಕ ಕೊಡುವ ಸಿಸ್ಟಂ ಅನ್ನು ತಾವು ತಪ್ಪಿಸಬೇಕು. ನಿಮ್ಮ ಸೆಕ್ರೆಟರಿಗಳು ಸಾರ್ ಇವತ್ತು ಡೆಲಿಗೇಟ್ಸ್‌ಗಳನ್ನು ಕಳುಹಿಸುತ್ತಿರುವುದು, ಬೋರ್ಡ್ ಅಲ್ಲ. ನಾವು ಮಾಡುತ್ತಿವೋ ನೀವು ಮಾಡುತ್ತಿರೋ ಬೇರೆಯವರು ಮಾಡುತ್ತಾರೋ ಗೊತ್ತಿಲ್ಲ. ಸೆಕ್ರೆಟರಿಗಳು ಪುಸ್ತಕ ಬಂದ ದಿವಸ ಕುಳಿತುಕೊಂಡು ಬರೆದು ಬಿಡುತ್ತಾರೆ. ಯಾರು ಡೆಲಿಡೆಟ್ ಎಂದು

ಬರೆಯುತ್ತಾರೆ. ಅದು ಡಿ.ಸಿ.ಸಿ. ಬ್ಯಾಂಕಿಗೋ, ಮಿಲ್ಕ್ ಯೂನಿಯನ್‌ಗೋ ಹೋಗಿ ಬಿಡುತ್ತದೆ. ಆಮೇಲೆ ಕುಳಿತುಕೊಂಡು ನಾಳೆ ನಾಡಿದ್ದು ಎಲೆಕ್ಷನ್ ಇರುವಾಗ ಅಲ್ಲಿ ರೆಸುಲೂಷನ್ ಪಾಸ್ ಆಗುತ್ತದೆ. ಸೆಕ್ರೆಟರಿಗಳನ್ನು ಇವತ್ತು ಹೊತ್ತುಕೊಂಡು ಹೋಗಿ ಮಡಗಿಕೊಳ್ಳುತ್ತಿದ್ದಾರೆ. ಯಾರು ಡೆಲಿಗೇಟ್ ಆಗಿ ಹೋಗಬೇಕು ಅವನು ಇವತ್ತು ಸೆಕ್ರೆಟರಿಯನ್ನು ಹೊತ್ತುಕೊಂಡು ಹೋಗಿ ಮಡಗಿ ಕೊಳ್ಳುತ್ತಾನೆ. ಅವನ ಹತ್ತಿರನೇ ಎಲೆಕ್ಷನ್ ಆಗುವವರೆಗೆ ಇದ್ದು ಬಿಡುತ್ತಾನೆ. You are not Empowering the Shareholders or the delegates. ಇವತ್ತು ನೀವು ಮಾಡುತ್ತಿರುವುದೆಲ್ಲಾ ಸೆಕ್ರೆಟರಿಗಳಿಂದ ಆಗುತ್ತಿರುವ ಚುನಾವಣೆ, ನಮ್ಮಿಂದ ಚುನಾವಣೆಗಳು ಆಗುತ್ತಿಲ್ಲ. ಅದು Foolishness to believe, ನಾವು ಯಾರನ್ನೋ ಡೆಲಿಗೇಟ್ ಮಾಡಿದೆವು. 60 to 70% of the Societies are controlled by secretaries. ಮೂರನೆಯದು ಆಡಿಟಿಂಗ್ ವಿಚಾರ ಏನು ಮಾಡಿದ್ದೀರಿ ಸಾರ್ ಅಡಿಟಿಂಗ್‌ನಲ್ಲಿ? ನಾನು ನಿಮಗೆ ಕಾಗದ ಕೊಟ್ಟೆ. ನಮ್ಮದು ಜೆ.ಸಿ.ಪುರ ಎಂದು ಹೇಳಿ, ನನ್ನ ಹಳ್ಳಿ ಸಹಕಾರ ಸಂಘದ್ದೇ ನಾಲ್ಕು ವರ್ಷದಿಂದ ಆಡಿಟ್ ಆಗಿಲ್ಲ. ನಾಲ್ಕು ವರ್ಷ, ಐದು ವರ್ಷಗಳಿಂದ ಆಗಿಲ್ಲ. ಈ ಮನೆಯಲ್ಲಿ ನಿಂತುಕೊಂಡು ಸನ್ಮಾನ್ಯ ಎಸ್.ಎಸ್.ಪಾಟೀಲ್‌ರವರನ್ನು ಬೇಡಿ, ಅಡಿಟಿಂಗ್ ಅನ್ನು ಇದರಿಂದ ಬೇರೆ ಮಾಡಬೇಡಿ. ನಿಮ್ಮ ಅಮೆಂಡ್‌ಮೆಂಟ್‌ಗಳೆಲ್ಲಾ ಅಗತ್ಯ ಇಲ್ಲ ಎಂದು ಹೇಳಿದೆ. ಅವರೇನಾದರೂ ಇಲ್ಲಿ ಕುಳಿತಿದ್ದರೆ ಅವರು ಎದ್ದು ನಿಂತು ಇವತ್ತು ಅಬ್ಜೆಕ್ಟ್ ಮಾಡಬೇಕಾಗಿತ್ತು. ಇವತ್ತು ನೀವು ಮತ್ತೆ ಅಡಿಟನ್ನು ತೆಗೆದುಕೊಂಡು ಬಂದ ಸಹಕಾರ ಸಂಘದ ರಿಜಿಸ್ಟ್ರಾರ್ ಅವರ ಕೆಳಗೆ ಹಾಕುತ್ತಿದ್ದೀರಲ್ಲಾ ಇವತ್ತು ನಿಮ್ಮ ಸಂಘಗಳು ಏಕೆ ಆಡಿಟ್ ಮಾಡುವುದಿಲ್ಲ? ಏಕೆ ನೀವು ಆಡಿಟ್ ಅನ್ನು ಮಾಡಿಸಲಿಲ್ಲ? ತಾವು ಮಂತ್ರಿಗಳಿಗೆ ಅದಕ್ಕಿಂತ ಒಳ್ಳೆಯ ಕೆಲಸ ಏನು ಇತ್ತು? ಹಿಂದೆ ಒಂದು ಕಾಲ ಇತ್ತು. ಆಡಿಟ್ ಆಗದೇ ಇದ್ದಂತಹ ಸೊಸೈಟಿಗಳನ್ನು ಎಲಿಜಬಲಿಟಿಯಿಂದ ಆಚೆಗೆ ತೆಗೆದು ಹಾಕುತ್ತಿದ್ದರು. ಒಂದು ಸೊಸೈಟಿ ಜನರಲ್‌ಬಾಡಿ ಮಾಡಿರಬೇಕು. ಜನರಲ್‌ಬಾಡಿಯಲ್ಲಿ ನಾವು ಆಡಿಟ್ ವರದಿಯನ್ನು ಓದಿರಬೇಕು. ಆಗ ಸೊಸೈಟಿ ಸಕ್ರಿಯವಾಗಿದೆ ಎಂದು ನಾವು ಭಾವಿಸಿಕೊಳ್ಳಬಹುದು. ಅಡಿಟ್ ಆಗಿಲ್ಲ, 4–5 ವರ್ಷದಿಂದ ಅಡಿಟ್ ಆಗಿಲ್ಲ. ಎರಡನೆಯದು ಈಗ ನಿಮ್ಮ ಕ್ಲಾಸ್ 441 ಸ್ಟ್ಯಾಚುಟರಿ ಅಡಿಟಿಂಗ್ is in stake. ಇನ್‌ಕಂ ಟ್ಯಾಕ್ಸ್‌ಗೆ ಪ್ರೊಫೆಷನಲ್ ಟ್ಯಾಕ್ಸ್ ಅನ್ನು ಇವರ್‍ಯಾರೂ ಇವತ್ತು ಒಪ್ಪುವ ಸ್ಥಿತಿಯಲ್ಲಿಲ್ಲ. ಚಾರ್ಟೆಡ್ ಅಕೌಂಟೆಂಟ್ 441 ಆಡಿಟರುಗಳು ಬಂದು ಅಡಿಟ್ ಮಾಡಬೇಕೆಂದು ಇವತ್ತು ನಿಯಮ ಆಗುತ್ತಿದೆ. ಇದು ಏಕೆ ಎಂದು ನಮಗೆ

ಅರ್ಥ ಆಗಿಲ್ಲ. ನೀವು ಇದಕ್ಕೆಲ್ಲಾ ಪರಿಹಾರವನ್ನು ಕಂಡು ಹಿಡಿಯಬೇಕು. ಸರ್ಕಾರ ಎಂದರೆ ಇಂಥದಕ್ಕೆ ಪರಿಹಾರ ಕಂಡು ಹಿಡಿಯಬೇಕು. ಹತ್ತು ವರ್ಷ ಆಗಿದೆ. While filling nomination if vacancy arises what to do. ನಮಗೆ ಗೊತ್ತಿಲ್ಲ. ನಮಗೆ ಗೊತ್ತೇ ಇಲ್ಲ. ನಿಮ್ಮಆಕ್ಟ್‌ನಲ್ಲಿ ಪ್ರಾವಿಜನ್ ಇಲ್ಲ. ಹಾಗೆಯೇ ಉಳಿದು ಬಿಡುತ್ತದೆ. 5 ಆದರೆ ಇನ್ನು 4 ಜನರನ್ನು ಕೋಆಪ್ಟ್ ಮಾಡಿಕೊಳ್ಳುತ್ತಾರೆ. 4 ಆದರೆ ಹಾಗೆಯೇ ಹೋಲ್‌ಪೀರಿಯಡ್ ಹಾಗೆಯೇ ಬಿಡುತ್ತದೆ. ಅವನು ಆಫೀಸ್ ಬೇರರ್ ಅನ್ನು ಮಾಡುವ ಹಾಗೆ ಇಲ್ಲ. ಇದಕ್ಕೆಲ್ಲಾ ನೀವು ಬರಬೇಕು. Housing Societies, my God: ಹೌಸಿಂಗ್ ಸೊಸೈಟಿಗಳು ಏನಾಗಿದ್ದಾವೆ ಎಂದು ಸ್ವಲ್ಪ ತೆಗೆದು ನೋಡಿದ್ದೀರಾ? ನಿಮ್ಮ ಬೆಂಗಳೂರಿನಲ್ಲಿರುವ ಹೌಸಿಂಗ್ ಸೊಸೈಟಿಗಳು ಒಂದು ತರಹ ಆದರೆ, ರೂರಲ್ ಹೌಸಿಂಗ್ ಸೊಸೈಟಿಗಳದ್ದು ಕಥೆ ಬೇರೆಯದೆ ಆಗಿದೆ. ನಮ್ಮ ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ಹೌಸಿಂಗ್ ಸೊಸೈಟಿ ಇತ್ತು. ಸಾಲ ಬಾರೋ ಮಾಡಿ ಬಿಟ್ಟರು. ಡಿಪಾಸಿಟ್ಸ್ ತೆಗೆದುಕೊಂಡರು. ಯಾರು ಇಲ್ಲದ ಹಾಗೆ ಹೋಗಿ ಬಿಟ್ಟರು. ಚಿಕ್ಕನಾಯಕನಹಳ್ಳಿ ಗೃಹ ನಿರ್ಮಾಣ ಸಹಕಾರ ಸಂಘ ತಾವು ಬರೆದುಕೊಳ್ಳಬೇಕು. ತನಿಖೆ ಮಾಡಬೇಕು. ಅಲ್ಲಿ ಮಾಡಿದ ಇನ್‌ವೆಸ್ಟ್‌ಮೆಂಟ್‌ಗಳಿಗೆ ಇವತ್ತು ವಾಪಸ್ ಕೊಡುವವರು ದಿಕ್ಕಿಲ್ಲ. ಏನು ಡಿಪಾಸಿಟ್ ತೆಗೆದುಕೊಂಡಿದ್ದಾರೆ ಆ ಡಿಪಾಸಿಟ್ ವಾಪಸ್ ಕೊಡಲು ದುಡ್ಡು ಇಲ್ಲ. ದಿವಸ ನಮ್ಮ ಹತ್ತಿರ ಬರುತ್ತಾರೆ. ಏನಾದರೂ ಮಾಡಿ ನಮ್ಮ ಹಣ ಹಿಂದಕ್ಕೆ ಕೊಡಿಸಿ. ನಿಮ್ಮ ಸಾಲ ಏನಾದರೂ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ನಾಯಿ ಕೊಡೆ ಹಾಗೆ ಎಲ್ಲಾ ಸಹಕಾರ ಸಂಘಗಳನ್ನು ಮಾಡಿ ಡಿಪಾಸಿಟ್ಸ್ ಕಲೆಕ್ಟ್ ಮಾಡುವುದಕ್ಕೆ ಅವರಿಗೆ ಪರ್ಮಿಷನ್ ಕೊಟ್ಟು ಇಡೀ ಕೋಆಪರೇಟಿವ್ ಮೂವ್‌ಮೆಂಟ್‌ನ್ನು ನೀವು ಹಾಳು ಮಾಡಿದ್ದೀರಿ. ಇದರ ಜೊತೆಗೆ ಅಗ್ರಿಕಲ್ಚರ್ ಕ್ರೆಡಿಟ್ ಸೊಸೈಟಿಗಳನ್ನು ನೀವು ನಾನ್ ಅಗ್ರಿಕಲ್ಚರ್ ಫೈನಾನ್ಸ್ ಮಾಡಿ ಎಂದು ಆದೇಶ ಕೊಟ್ಟಿರಿ. ಹೇಳಿದ್ದು ದೊಡ್ಡ ಪಾಠ. ಆ ಕಡೆಯಿಂದ ಹಣ ತೆಗೆದುಕೊಂಡು ಬಂದು ಬಿಡುತ್ತೇವೆ. ಬಡ್ಡಿ ಜಾಸ್ತಿ ತೆಗೆದುಕೊಂಡು ಬಿಡುತ್ತೇವೆ. ಎನ್‌ಎಫ್‌ಎಸ್ ಲೋನ್ ಕೊಟ್ಟು ಬಿಟ್ಟು ಅದರಲ್ಲಿಯೇ ನಾವು ಪೂಲ್ ಮಾಡಿಕೊಂಡು ಈ ಕಡೆ ನಾವೇ ಒಂದಿಷ್ಟು ಸಾಲ ಕೊಡಲಿಕ್ಕೆ ಈ ಸೊಸೈಟಿಗಳನ್ನು ಬೆಳೆಸಲಿಕ್ಕೆ ನಮಗೆ ಅವಕಾಶ ಎಂದು ಹೇಳುವುದು ಎಲ್ಲಾ ನಂಬರ್-1 ಫ್ರಾಡ್ಸ್. Sir, your office-bearers sitting in the ಅರ್ಹತೆ ಮೇಲೆ ಅವನಿಗೆ ಇರುವ ಆಸ್ತಿ, ಅಸೆಟ್ ಮೇಲೆ ಸಾಲ ಕೊಡುವ ಸ್ಟೇಜ್ ತೆಗೆದುಕೊಂಡು ಬನ್ನಿ ಅಂದರೆ ಕಥೆ ಹೇಳುತ್ತಾರೆ. ಇಲ್ಲ ಇಲ್ಲ ವಸೂಲಿ ಮಾಡುವುದಕ್ಕೆ ಆಗುವುದಿಲ್ಲ. ಮೋಸ ಮಾಡಿ ಬಿಡುತ್ತಾರೆಂದು ಹೇಳುತ್ತಾರೆ. ಏಕೆ ಬೇಕು ನಿಮ್ಮ

ಸಹಕಾರಿ ಸಂಘ ಎಷ್ಟು ಜನಕ್ಕೆ ಕೊಟ್ಟಿದ್ದೀರಿ? ಏನು ಎಕ್ಸ್‌ಪ್ಯಾನ್‌ಷನ್ ಇಲ್ಲ. ಸಾರ್, ಈಗ ಬರುತ್ತಾರೆ. ಇಷ್ಟು ದಿವಸದವರೆಗೆ ನಿಮ್ಮ ಸಹಕಾರಿ ಸಂಘಕ್ಕೆ ಸಾಲಕ್ಕೆ ಯಾರೂ ಬರುತ್ತಿರಲಿಲ್ಲ. 12.5 ಪರ್ಸೆಂಟ್, ಹದಿನಾಲ್ಕು ಕಾಲು ಪರ್ಸೆಂಟ್ ಇಂಟರೆಸ್ಟ್ ರೇಟು ಇಟ್ಟಿದ್ದೀರಿ. ನಮಗೆ ಬ್ಯಾಂಕ್‌ನಿಂದ ಆಕ್ಸೆಸ್ ಇತ್ತು, ಈ@ಸಿ ಇತ್ತು. 11 ರಿಂದ 10.5 ವರೆಗೆ ನಾವು ಗ್ರಾಮೀಣ ಬ್ಯಾಂಕ್‌ನಲ್ಲೋ ಅಥವಾ ಕಮರ್ಷಿಯಲ್ ಅಥವಾ ನ್ಯಾಷನಲೈಜ್ ಬ್ಯಾಂಕ್‌ನಲ್ಲೋ ಸಾಲವನ್ನು ತೆಗೆದುಕೊಳ್ಳುತ್ತಿದ್ದೆವು. ಈಗ ಯಾವಾಗ ಒಂದು ಕಡೆ ಪ್ರಚಾರ ಸಿಕ್ಕಿತು ಇನ್ನೊಂದು ಕಡೆ ಇಂಟರೆಸ್ಟ್, ಫೈನಲ್ ಇಂಟರೆಸ್ಟ್ ವೇವ್ ಆಯಿತು. ಸತ್ಯ ಅವನ ಮನಸ್ಸಿಗೆ ಬಂದು ಬಿಡುತ್ತದೆ. ನನಗೂ ಒಂದು ದಿವಸ ಈ ಎಲ್ಲಾ ಅನುಕೂಲಗಳು ಸಿಕ್ಕಬಹುದು ನಾನೂ ಸೊಸೈಟಿಯಲ್ಲಿ ಸಾಲ ತೆಗೆದುಕೊಳ್ಳಬಹುದು. ನಾನೂ ಪೇಕಾರ್ಡ್ ಬ್ಯಾಂಕಿಗೆ ಹೋಗಿ ಸಾಲ ತೆಗೆದುಕೊಳ್ಳಬಹುದು ಎಂಬ ಭಾವನೆ ಬರುತ್ತದೆ. ಆಗ ಬರುತ್ತಿರುವವನಿಗೂ ನಿಮ್ಮ ಸಹಕಾರ ಸಂಘದ ಒಬ್ಬನಿಗೂ ಎಂಟರ್‌ಟೇನ್ ಮಾಡುತ್ತಿಲ್ಲ. ಒಬ್ಬರಿಗೂ ನಿಮ್ಮ ಲ್ಯಾಂಡ್ ಬ್ಯಾಂಕ್ ಎಂಟರೆಟೇನ್ ಮಾಡುತ್ತಿಲ್ಲ. ನೀವು ಏನೇ ಇಲ್ಲಿ ಕುಳಿತುಕೊಂಡು ಹೇಳಿ 30 ಪರ್ಸೆಂಟ್ ಜಾಸ್ತಿ ಕೊಡಿ ಎಂದು ಹೇಳಿದ್ದೇವೆ ಎಂದರೂ, 30 ಪರ್ಸೆಂಟ್ ಹೇಗೆ ಜಾಸ್ತಿ ಮಾಡುತ್ತಾರೆ? ನಾನು ಹೋದ ವರ್ಷ 70 ಸಾವಿರ ರೂ ತೆಗೆದುಕೊಂಡಿದ್ದೇನೆ ಅಂದರೆ 10 ಸಾವಿರ ಜಾಸ್ತಿ ಮಾಡಿಕೊಂಡು 30 ಪರ್ಸೆಂಟ್ ನಿಮಗೆ ಎಕ್ಸ್‌ಪ್ಯಾನ್‌ಷನ್ ಮಾಡಿದ್ದೇವೆಂದು ಹೇಳುತ್ತಾರೆ. New Entry into your loan structure ಆಗಲೇ ಇಲ್ಲ. ಯಾರೂ ನಿಜವಾಗಿ ಈಗ ಸಾಲ ತೆಗೆದುಕೊಳ್ಳಬೇಕು ಈ ಕ್ಷೇತ್ರದಲ್ಲಿ ನನಗೆ ಒಳ್ಳೆಯದಾಗುತ್ತದೆ, ಎನ್ನುವ ಭಾವನೆ ಇಟ್ಟುಕೊಂಡ ಅವನನ್ನು ನೀವು ಸಹಕಾರಿ ಕ್ಷೇತ್ರಕ್ಕೆ ಬಿಡಲೇ ಇಲ್ಲ. ಅವನನ್ನು ಬಿಡುವ ಕೆಲಸವನ್ನು ನೀವು ಮಾಡಬೇಕು. ಎರಡನೆಯದು ಮಾರ್ಜಿನಲ್ ಫಾರ್ಮರ್ಸ್‌ಗೆ ಸ್ಮಾಲ್ ಫಾರ್ಮರ್ಸ್‌ಗೆ ಲೋನ್ ಅನ್ನು ಏನು ಕೊಡುತ್ತಿದ್ದೀರಿ, ಅದನ್ನು ಡಬಲ್ ಮಾಡಬೇಕು. ಈಗ ಒಂದು ಎಕರೆ ರಾಗಿಗೆ ಸಾಲ ಬೇಕು ಎಂದರೆ (ಬಿ) ಕಾಂಪೊನೆಂಟ್ (ಎ) ಕಾಂಪೊನೆಂಟ್ ಎರಡೂ ಸೇರಿ ನಾಲ್ಕು ಸಾವಿರ ರೂಪಾಯಿ ಕೊಡಬಹುದು. ನಾಲ್ಕು ಸಾವಿರ ರೂಪಾಯಿಗೆ ಇವತ್ತು ಆ ಕಸಬನ್ನು ಮಾಡುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ದೇಶಪಾಂಡೆಯವರೇ ನಿಮ್ಮದೇನು ಫೈನಾನ್ಸ್ ಇದೆ ಅದನ್ನು ನೀವು ರಿಸ್ಟ್ರಕ್ಚರ್ ಮಾಡಲೇ ಬೇಕು. 8 ಸಾವಿರ ರೂಪಾಯಿಗೆ ಇವತ್ತು ಒಂದು ಎಕರೆಯಲ್ಲಿ ಬಾಳೆ ಬೆಳೆಯುವುದಕ್ಕೆ ಆಗುತ್ತಿಲ್ಲ. Scale of finance has to be doubled, not only loan. ಇವತ್ತಿನ ರೇಟಿಗೆ ಜಾಸ್ತಿ ಆಗಬೇಕು. ನಾನು ಅವತ್ತು 125, 200,

ರೂಪಾಯಿಗಳ ಡಿಎಪಿಗೆ ಕೊಡುತ್ತಿದ್ದವನು ಇವತ್ತು ನಾನು 480 ರೂಪಾಯಿ ಕೊಟ್ಟು ಕೊಳ್ಳಬೇಕು. ಜಾಸ್ತಿ ಮಾಡಬೇಕು. ನಿಮ್ಮ ಲ್ಯಾಂಡ್ ವ್ಯಾಲ್ಯೂನು ಜಾಸ್ತಿ ಆಗಿದೆ. ನಿಮ್ಮ ಪ್ರೊಡ್ಯೂಸ್ ವ್ಯಾಲ್ಯು ಜಾಸ್ತಿ ಆಗಿದೆ. ಎಲ್ಲವೂ ಜಾಸ್ತಿ ಆದಾಗ ಲೋನನ್ನು ಕೂಡ ಜಾಸ್ತಿ ಮಾಡಬೇಕು. ಆಮೇಲೆ ಬೇರೆ ಇನ್‌ಪುಟ್ಸ್ ನಮಗೆ ಇವತ್ತು ಲಭ್ಯ ಇಲ್ಲ. 10 ವರ್ಷವಾದ ಮೇಲೆ ನಿಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಬರುತ್ತಿದ್ದ ಯಾವುದೇ ಇನ್‌ಪುಟ್ಸ್ ಲಭ್ಯ ಇಲ್ಲದೇ ಇದ್ದಾಗ I have to depend only on loan as an input. ಫಾರ್ಮರ್ಸ್ ಇವತ್ತು ಕೃಷಿಯ ಸಾಲ ಮತ್ತು ಕೆಇಟಿ ಪವರ್ ಎರಡನ್ನೇ ಇನ್‌ಪುಟ್ ಎಂದು ತಿಳಿದುಕೊಳ್ಳಬೇಕಾಗಿದೆ. ರಾಜ್ಯದಿಂದ ಅಥವಾ ರಾಷ್ಟ್ರ ಸರ್ಕಾರ ನಮಗೆ ಕೊಡುತ್ತಿರುವ ಯಾವುದಾದರೂ ಇನ್‌ಪುಟ್ ಇದೆ ಎಂದರೆ ಇವರೆಡೇ ಎನ್ನುವ ಭಾವನೆ ಇದೆ. ಅಲ್ಲಿ ಏನಾಗುತ್ತದೆಂದರೆ, constraints. ಈಗ ನಾವು ಕಟ್ಟಿಬಿಟ್ಟಿರುತ್ತೇವೆ. ನೀವು ಕೊಟ್ಟ ಸಾಲ ಅದಕ್ಕಿಂತಲೂ ಕಡಿಮೆ ಬಂದರೆ, ಇನ್ನೂ ಸ್ವಲ್ಪ ಹೊಂಚಿಕೊಂಡು ಬಂದು ಕಟ್ಟಬೇಕಾಗುತ್ತದೆ. Scale of Finance ನೀವು ಜಾಸ್ತಿ ಮಾಡದೆ ಹೋದರೆ, ನಿಜವಾಗಿಯೂ ಕಷ್ಟವಾಗುತ್ತದೆ. ಬೋರ್‌ವೆಲ್ ಇಟ್ಟುಕೊಂಡಿರುವವರು, ಮತ್ತೊಬ್ಬರಿಗೆ ಕಷ್ಟವಾಗುತ್ತದೆ. ಮತ್ತು Rabi loans ಬಗ್ಗೆ ಹೇಳುವುದಾದರೆ, ನೀವು Khariff loanನಲ್ಲಿ ಈ ರಾಜ್ಯದಲ್ಲಿ 10 ಪರ್ಸೆಂಟ್ Rabi loan ಕೊಟ್ಟರೆ ಹೆಚ್ಚು. ನೀವು ತೆಗೆಸಿ ನೋಡಿ Rabi Loan ಎಂದರೆ, ನೀರಾವರಿ ಇರುವವರಿಗೆ ಅಕ್ಟೋಬರ್, ಡಿಸೆಂಬರ್ ತಿಂಗಳಿನಲ್ಲಿ ಕೊಡುವುದು. ಸೆಕೆಂಡ್ ಕ್ರಾಪ್‌ಗೆ ನೀರಾವರಿ ಇರುವವರಿಗೆ ಮಾತ್ರ ಆ ಲೋನ್ ಕೊಡುವುದು. ಬೇಸಿಗೆ ಬೆಳೆಗೆ Khariff ಎಂದು ಕರೆಯುತ್ತೇವೆ. ಆ ಲೋನ್ ಅನ್ನು ಬಹಳ ಕಡಿಮೆ ಜನರಿಗೆ ಕೊಡುತ್ತಿದ್ದೀರಿ. ಮತ್ತೆ ಕ್ರೆಡಿಟ್ ಕಾರ್ಡ್. ಆ ಕ್ರೆಡಿಟ್ ಕಾರ್ಡ್ ಭಾಷಣಕ್ಕೆ ಬಹಳ ಚೆನ್ನಾಗಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಕೊಡುತ್ತಿದ್ದೀರಲ್ಲಾ ಏನೂ ಆಗಲಿಲ್ಲ. ಅದು ಪೂನಾ ಪ್ಯಾಟ್ರನ್ ಎಂದು ನೀವು ಹೇಳಿದಿರಿ. ನಾನು ಅದನ್ನು ನೋಡಿದ್ದೆ. ನಾನು ಆಗ ಕೆಎಂಎಫ್‌ನಲ್ಲಿರುವಾಗ ಅಲ್ಲಿಗೆಲ್ಲಾ ಹೋಗಿದ್ದೆ. ಅದೊಂದನ್ನು ತೋರಿಸಿಬಿಟ್ಟರೆ ಇಡೀ ಡಿಸ್ಟ್ರಿಕ್ಟ್‌ನಲ್ಲಿರುವ ಪಿಎಸ್‌ಎಸ್‌ಎಸ್‌ಎಲ್‌ನಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ ಅವರು ಅವಕಾಶ ಮಾಡಿಕೊಟ್ಟಿದ್ದರು. ನಾನು VISA ಇಲ್ಲವೇ Master Card ಇಟ್ಟುಕೊಂಡು Throughout India ದೇಶದಲ್ಲಿ ಡ್ರಾ ಮಾಡುವಂತೆ ಮಾಡಿದ್ದರೆ, ಆ ಡಿಸಿಸಿ ಬ್ಯಾಂಕ್‌ನ ವ್ಯಾಪ್ತಿಯಲ್ಲಿ ಕೈಸಾಲವಾಗಿ 2 ಸಾವಿರ, 3 ಸಾವಿರ ಇಲ್ಲವೇ 5 ಸಾವಿರದವರೆಗೆ ಒಬ್ಬ ರೈತನಿಗೆ ಎಮರ್ಜೆನ್ಸಿಗೆ ದುಡ್ಡು ಸಿಕ್ಕಿರುತ್ತಿತ್ತು. ನೀವೀಗ

ಕಿಸಾನ್ ಕ್ರಿಡಿಟ್ ಕಾರ್ಡ್ ಎಂದಿರಿ. ಅದನ್ನು ರೆಗ್ಯುಲರ್ ಲೋನ್‌ಗೆ ಮಾತ್ರ ಬಳಸುತ್ತಿದ್ದಾರೆ. ತರಿಸಿ ನೋಡಿ ಕಿಸಾನ್ ಕ್ರೆಡಿಟ್ ಕಾರ್ಡ್ ಗುರುಪಾದಪ್ಪ ನಾಗಮಾರಪಲ್ಲಿಯವರು ಮಾಡುತ್ತಿದ್ದಾರಲ್ಲ, ಅಧ್ಯಕ್ಷಗಿರಿ ರೆಗ್ಯುಲರ್ ಲೋನ್‌ಗೆ ಬಿಟ್ಟು ಇನ್ಯಾವುದೇ Cash Drawals ಗೂ ನೀವು ಅಧಿಕಾರ ಕೊಡಲಿಲ್ಲ. Cash Drawalsಗೆ ನಮಗೂ ಸ್ವಲ್ಪ ಕೊಡಿ. ಒಂದು ತಿಂಗಳೋ, ಎರಡು ತಿಂಗಳೋ ಸರ್ವಿಸ್ ಚಾರ್ಜ್ ಹಾಕಿ. ವಾಪಸ್ಸು ತೆಗೆದುಕೊಳ್ಳಿ. ವಾಪಸ್ಸು ಕಟ್ಟಿಸಿಕೊಂಡ ಮೇಲೆ ಮತ್ತೆ ಕೊಡಿ. ಒಂದು ವರ್ಷದ ಟರ್ನ್ ಓವರ್‌ಗೆ ಮಾತ್ರ ನೀವು ನಮಗೆ ಆ ಕಾರ್ಡ್ ಕೊಡುವುದು. ಗೊಬ್ಬರಕ್ಕೆ ಮಾತ್ರ ನೀವು ಕಿಸಾನ್ ಕ್ರೆಡಿಟ್ ಕಾರ್ಡ್ ಉಪಯೋಗಿಸುತ್ತೇವೆಂದು ಹೇಳಿ ಕಿಸಾನ್ ಕ್ರೆಡಿಟ್ ಕಾರ್ಡ್ ಮಾಡಿದ್ದೇವೆ, ಕಿಸಾನ್ ಕ್ರೆಡಿಡ್ ಕಾರ್ಡ್ ಮಾಡಿದ್ದೇವೆಂದು ಹೇಳಿದರೆ ಏನು ಪ್ರಯೋಜನ? Atleast in the DCC bank area.... ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನೀವು ಹೇಳಿದ್ದು ನಿಜ. ಆದರೆ, immediately ಅವರಿಗೆ ಬಹಳಷ್ಟು ಸವಲತ್ತುಗಳಿವೆ. ವರ್ಷಕ್ಕೊಂದು ಸಲ ಕೊಡುವುದು. ಆದರೆ ಇದು ಹಾಗಿಲ್ಲ. ನಾಲ್ಕು ದಿವಸ ಇಟ್ಟುಕೊಂಡು ನಾಲ್ಕು ದಿವಸದಲ್ಲೇ ಹೋಗಿ ವಾಪಸ್ಸು ಕೊಡಬಹುದು. ಅದೊಂದು ಸವಲತ್ತು ಇದೆ. ಆದರೆ, ನೀವು ಹೇಳಿದಂತೆ ಬೇರೆ ಬೇರೆ ಎಲ್ಲಾ ಕಡೆ ಹೋದರೆ ಸಿಗತಕ್ಕಂಥಾದ್ದು ಇದರಲ್ಲಿ ಇಲ್ಲ. ಅದರ ಬಗ್ಗೆ ನೋಡಬೇಕು.

ಶ್ರೀ ಜೆ.ಸಿ ಮಾಧುಸ್ವಾಮಿ: ಇದೇ ಸೊಸೈಟಿಯಲ್ಲಿ ನಾನು ಸಾಲ ತೆಗೆದುಕೊಂಡು ತೀರಿಸಿ ಮತ್ತೆ ಸಾಲ ತೆಗೆದುಕೊಳ್ಳುವುದಕ್ಕೆ ನೀವು ಕೊಟ್ಟಿದ್ದೀರಿ. ಇಲ್ಲವೆಂದು ನಾನು ಹೇಳಲಿಲ್ಲ. ಆದರೆ, Major junk is utilized for Khariff Loan Advance. ಎರಡು ಲೋನ್ ಕೊಡುವುದಿಲ್ಲ. ಕಿಸಾನ್ ಕ್ರೆಡಿಟ್ ಕಾರ್ಡ್‌ನಲ್ಲೇ ನೀವು ಎ-ಕಾಂಪೊನೆಂಟ್, ಬಿ-ಕಾಂಪೊನೆಂಟ್ ಲೋನ್ ಕೊಡುತ್ತಿದ್ದೀರಿ.

ಶ್ರೀ ಆರ್.ವಿ.ದೇಶಪಾಂಡೆ: ನಾವು ಇಲ್ಲಿ more than 93-94% farmers cover ಮಾಡಿದ್ದೇವೆ. ಅದಕ್ಕೆ ಅನಂತರ ಬರುತ್ತೇನೆ. ಕಿಸಾನ್ ಕ್ರೆಡಿಟ್ ಕಾರ್ಡ್ ಎಂದರೆ, ಒಂದು O.D facility ಹಾಗೆ. VISA ಮತ್ತು Master Card ಬಗ್ಗೆ ನೀವು ಹೇಳಿದಿರಲ್ಲಾ ಇಲ್ಲಿ ಫಾರ್ಮರ್‌ಗೆ ಒಂದು ಲಿಮಿಟ್ ಇರುತ್ತದೆ. ತಾವು ಹೇಳಿದಂತೆ ಅವನ ಹಿಡುವಳಿ, ಅವನ ಲ್ಯಾಂಡ್ಸ್ ಎಷ್ಟಿದೆ, ಮತ್ತೊಂದು ಏನಿದೆ, ಅದರ ಮೇಲೆ 50 ಸಾವಿರ ಲಕ್ಷ ರೂ ಲಿಮಿಟ್ ಹಾಕುತ್ತಾರೆ. ಹಾಗಾದರೆ, ಆ ಲಿಮಿಟ್ ಅನ್ನು within one year ಬೇಕಾದಾಗ ತೆಗೆದುಕೊಳ್ಳಬಹುದು, ಬೇಕಾದಾಗ ಮರುಪಾವತಿ ಮಾಡಬಹುದು. ಇವೊತ್ತು ತಾವು ಹೇಳಿದಂತೆ

ಅದನ್ನು ಬೇರೆ ಯಾವುದೇ ಕೆಲಸಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಬರುವುದಿಲ್ಲ. ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ನಾವು ಎಕ್ಸಾಮಿನ್ ಮಾಡೋಣ. ಕಾಯಿದೆ-ಕಾನೂನಿನಲ್ಲಿ ಏನು ಮಾಡುವುದಕ್ಕೆ ಸಾಧ್ಯ ಎಂಬುದನ್ನು ವಿಚಾರ ಮಾಡೋಣ. ಅದರಲ್ಲಿ ಈಗ ಎಷ್ಟು Advantage ಆಗುತ್ತದೆಂದರೆ, ಯಾರೂ ಆ ಕಾರ್ಡನ್ನು ಸರಿಯಾಗಿ, ನಿಜವಾಗಿಯೂ ಉಪಯೋಗಿಸುತ್ತಾನೆ, ಅವನ Rate of interest is coming to 4 to 4.5%. ಆತ ಸರಿಯಾಗಿ ಆ ಕಿಸಾನ್ ಕ್ರೆಡಿಟ್ ಕಾರ್ಡನ್ನು ಉಪಯೋಗಿಸಿದರೆ, Suppose, 1 ಲಕ್ಷಕ್ಕೆ ಲಿಮಿಟ್ ಇದೆ. ಈಗ ಐದು ಸಾವಿರ ಬೇಕು. ಐದು ಸಾವಿರ ತೆಗೆದುಕೊಂಡರೆ Average interest is coming to 4.5% to 5%. ಆದರೆ, ತಾವು ಹೇಳಿದಂತೆ ಸ್ವಲ್ಪ Enlighten ಮಾಡಿ. ಅದನ್ನು ಸರಿಯಾಗಿ use ಮಾಡಬೇಕಾಗುತ್ತದೆ. ಅದನ್ನು ಯಾವ ಪ್ರಕಾರ extend ಮಾಡಲು ಸಾಧ್ಯವಾಗುತ್ತದೆಂಬುದನ್ನು ಎಕ್ಸಾಮಿನ್ ಮಾಡೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ನಿಮಗೆ ಕೇಳಿದ್ದು ಕ್ರೆಡಿಟ್ ಕಾರ್ಡ್ ಅನ್ನು ಎಮರ್ಜೆನ್ಸಿಗೆ ಯೂಸ್ ಮಾಡುವಂತಿರಬೇಕು. ಈಗ ನನ್ನ ಜೇಬಿನಲ್ಲಿ ಒಂದು ಕಾರ್ಡು ಇದ್ದರೆ ನನಗೆ ಎಲ್ಲಾದರೂ ಐದು ಸಾವಿರ ರೂಪಾಯಿ ಸಿಗುತ್ತದೆಂಬ ಧೈರ್ಯದಲ್ಲಿರಬೇಕು. ಅದೇ ಸಹಕಾರ ಸಂಘದಲ್ಲಿ ನಾನು ರೆಗ್ಯುಲರ್ ಲೋನಿಯಾಗಿ ಡ್ರಾ ಮಾಡುವುದಕ್ಕೆ ಅವಕಾಶವಾಗಿದ್ದು ಬಿಟ್ಟರೆ, it cannot be treated as Credit Card. ಅದು ಕ್ರೆಡಿಟ್ ಕಾರ್ಡ್‌ನ definition ಅಲ್ಲ. ಅದು ನನಗೆ ಲೋನ್ ಕಾರ್ಡ್ ಆಗಬಹುದಷ್ಟೆ. ನೀವು ಡಿಸಿಸಿ ಬ್ಯಾಂಕ್‌ಗಳಲ್ಲೋ ಅಥವಾ ಚೆನ್ನಾಗಿರುವ ವಿಎಸ್‌ಎಸ್‌ಎನ್‌ಎಲ್‌ಗಳಲ್ಲೋ ಒಂದು ಜಿಲ್ಲೆಯೊಳಗೆ ಒಂದು ಎಮರ್ಜೆನ್ಸಿ ಇದ್ದಾಗ ಉಪಯೋಗಿಸಿಕೊಳ್ಳುವ ಹಾಗೆ ಇರಬೇಕು. ಒಬ್ಬ ರೈತನಾಗಿ ನಾನು ತುಮಕೂರಿಗೆ ಬರುತ್ತೇನೆ. ನನಗೇನೋ ಒಂದು ಎಮರ್ಜೆನ್ಸಿ ಬರುತ್ತದೆ. ಆಗ ಐದು ಸಾವಿರ ರೂಪಾಯಿಗಳನ್ನು ಆ ಕಾರ್ಡಿನಿಂದ ತೆಗೆದುಕೊಳ್ಳುವುದಕ್ಕೆ ಶಕ್ತಿಯಿರುವಂತೆ ಮಾಡಬೇಕು. Atleast, concerned DCC Bank ನಲ್ಲೋ, ಅಪೆಕ್ಸ್ ಬ್ಯಾಂಕ್‌ಗಳಲ್ಲೋ, ಎಲ್ಲಾದರೂ ಡ್ರಾ ಮಾಡುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟರೆ, ಅದು ಉಪಯೋಗಕ್ಕೆ ಬರುತ್ತದೆ. ನೀವು ಮಾಡಿ. ನೀವು ನಮ್ಮ ಆಸ್ತಿಯನ್ನು pledge ಮಾಡಿಕೊಂಡಿರುತ್ತೀರಿ, ನೀವೇನೂ ಪುಗಸಟ್ಟೆಗೆ ಕೊಡುವುದಿಲ್ಲ. ನಮ್ಮ asset ಎಲ್ಲವನ್ನೂ ನಿಮಗೆ ಹೈಪಾಥಿಕೇಟ್ ಮಾಡಿರುತ್ತೇವೆ. ನಿಮ್ಮದು ಅಲ್ಲಿ ತೆಗೆದುಕೊಂಡರೂ ಸಾಲವೇ, ಇಲ್ಲಿ ತೆಗೆದುಕೊಂಡರೂ ಸಾಲವೇ. ಅದನ್ನು ನೀವು ಮಾಡಬೇಕಾಗುತ್ತದೆ. ರೈತರೂ ಕೂಡ movement ನಲ್ಲಿರುವಾಗ

ಎಲ್ಲಾದರೂ ಎಮರ್ಜೆನ್ಸಿ ಬಂದು 2 ಸಾವಿರ, 3 ಸಾವಿರ 5 ಸಾವಿರ ಹಣ ಸಿಗುವಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಎಲ್ಲರಿಗೂ ಕೊಡಿ ಎಂದು ನಾವು ಹೇಳುವುದಿಲ್ಲ. Eligible ಇರುವವರಿಗೆ ನೀವು ಮಾಡದೆ ಹೋದರೆ ಏನು ಪ್ರಯೋಜನವಾಗುತ್ತದೆ? ಸ್ವಲ್ಪ rethink ಮಾಡಬೇಕು. ಮೂರನೆಯದು, ಈ ಬಿ–ಕಾಂಪೊನೆಂಟ್. ಈಗೇನೋ ಅದನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಿಬಿಟ್ಟಿದ್ದೀರಿ. ಬಿ–ಕಾಂಪೊನೆಂಟ್ ಅನ್ನು ಇಷ್ಟೆ ಪರ್ಸೆಂಟ್ ಉಪಯೋಗಿಸಬೇಕು, ಕೆಮಿಕಲ್ ಹಾಕಬೇಕೆಂದು ಏನಿತ್ತು, ಅದು ಈಗಿಲ್ಲ. ಬಿ ಕಾಂಪೊನೆಂಟ್‌ನಲ್ಲೂ ಕೂಡ ಮೆನ್ಯೂರ್ ಕೊಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳಿದ್ದೆವು. ಅದನ್ನು ತೆಗೆದುಹಾಕಿದ್ದಕ್ಕೆ ನಾನು ನಿಮ್ಮನ್ನು ಶ್ಲಾಘಿಸುತ್ತೇನೆ. ಆದರೆ, ಸಾಲ ಕೊಡಬೇಕಾದರೆ ಏನಾಗಿದೆಯೆಂದರೆ, ನಾನು ನಿಮಗೆ ಕೇಳುವುದೇನೆಂದರೆ, ದಯಮಾಡಿ Additional shares ಕಟ್ ಮಾಡುವ ವ್ಯವಸ್ಥೆಯನ್ನು ತಪ್ಪಿಸಬೇಕು. ಯಾಕೆ ಸಾರ್, ನನ್ನ ಹಣಕ್ಕೆ ನಾನೇ ಬಡ್ಡಿ ಕೊಡಬೇಕೇ? ನಾನು ಒಂದು ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ನಿಮ್ಮ ಸೊಸೈಟಿಯಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಬಿಡಬೇಕಾದರೆ, ಮಾರವಾಡಿಗೂ ನಿಮಗೂ ಏನು ವ್ಯತ್ಯಾಸವೆಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಮತ್ತೆ ನಿಮ್ಮ ಯಾವುದೇ ಬ್ಯಾಂಕ್ ಕೂಡ ಪ್ರಾಫಿಟ್ ಮಾಡಲಿಲ್ಲ, ಮತ್ತು ನಿಮ್ಮ ಯಾವುದೇ ಬ್ಯಾಂಕ್ ಸಹ ಡಿವಿಡೆಂಡ್ ಹಂಚಲಿಲ್ಲ. ನನಗೆ ಅದರಿಂದ ಬರಬೇಕಾದ ಒಂದು ರೂಪಾಯಿ ಕೂಡ ವಾಪಸ್ಸು ಬರುವುದಿಲ್ಲ. ನಾನು ಅಲ್ಲಿ ಹತ್ತು ಸಾವಿರ ಬಿಟ್ಟಿರುತ್ತೇನೆ. 90 ಸಾವಿರ ರೂ ತೆಗೆದುಕೊಂಡು 1 ಲಕ್ಷ ರೂಪಾಯಿಗೆ ಬಡ್ಡಿ ಕಟ್ಟಿ Final adjustment ಮಾಡುವಾಗ Additional share adjust ಮಾಡಿಕೊಳ್ಳುತ್ತೇವೆ. ಮಾನ್ಯ ಸಿಂಧ್ಯಾರವರೆ, ಇದು ನ್ಯಾಯವೇ? ಒಂದು ಲಕ್ಷ ರೂಪಾಯಿಗೆ ಸಾಲ ತೆಗೆದುಕೊಂಡರೆ, ಸೊಸೈಟಿಯವರು ಹತ್ತು ಸಾವಿರ ರೂಪಾಯಿ ಇಟ್ಟುಕೊಳ್ಳುವುದು. ಆಮೇಲೆ ಅದನ್ನು ಡಿಸಿಸಿ ಬ್ಯಾಂಕ್‌ಗೆ ಕಳುಹಿಸುವುದಂತೆ. ಇವೊತ್ತು ಒಂದು ಟ್ರಾಕ್ಟರ್‌ಗೆ ಮೂರೂವರೆ ಲಕ್ಷದಿಂದ ನಾಲ್ಕೂವರೆ ಲಕ್ಷ ಐದು ಲಕ್ಷ ರೂಪಾಯಿಗಳಷ್ಟು ಸಾಲ ಆಗುತ್ತದೆ. Just imagine. ಲ್ಯಾಂಡ್ ಬ್ಯಾಂಕ್‌ನಿಂದ ಒಂದು ಟ್ರಾಕ್ಟರ್ ತೆಗೆದುಕೊಳ್ಳುತ್ತೇನೆಂದರೆ, ಟ್ರಾಕ್ಟರ್ ಇಂಜೀನ್ ಮೂರೂವರೆ ಲಕ್ಷ ರೂಪಾಯಿಗಳಾಗುತ್ತದೆ. Trailor ಎಲ್ಲಾ ಸೇರಿದರೆ ಇನ್ನೂ ಒಂದು ಲಕ್ಷ, ಒಂದೂವರೆ ಲಕ್ಷ ಆಗುತ್ತದೆ. ಒಟ್ಟು ಐದು ಲಕ್ಷ ರೂಪಾಯಿಗಳ ಸಾಲಕ್ಕೆ ನಾನು ಅಲ್ಲಿ ಐದು ಪರ್ಸೆಂಟ್ ಷೇರು ಬಿಡುತ್ತೇನೆ. ನಾನು ಬಿಡುತ್ತಿಲ್ಲವೇ? ಏತಕ್ಕೆ? ಷೇರು ತೆಗೆದುಕೊಳ್ಳುತ್ತೀರಲ್ಲಾ ಹೋಗಲಿ, ನನ್ನ initial

deposit ಆದರೂ ನೀವು ಬಿಡುತ್ತೀರಾ? ಹತ್ತು ಪರ್ಸೆಂಟ್ ಕೇಳಿಯೇ ಕೇಳುತ್ತೀರಿ. ಇನಿಷಿಯಲ್ ಡಿಪಾಸಿಟ್ ಕೇಳುತ್ತೀರಿ, ಷೇರು ಕೇಳುತ್ತೀರಿ, ಸಾಲ ಹಾಕುತ್ತೀರಿ. ಇನ್ನೂ ಇದಕ್ಕಿಂತಲೂ ದುರಂತವೇನೆಂದರೆ, ಮಾನ್ಯ ದೇಶಪಾಂಡೆಯವರೆ, ನಾನು ಯಾವತ್ತೂ ಕೂಡ default ಆಗಿದ್ದವನಲ್ಲ. ನಿಮ್ಮ ಪಿಎಲ್‌ಡಿ ಬ್ಯಾಂಕ್‌ನಿಂದ ಜೀಪ್ ಬಂದುಬಿಟ್ಟರೆ, ರೆಕವರಿ ಚಾರ್ಜಸ್ ನನ್ನ ಅಕೌಂಟ್‌ಗೂ ಆಗಿಬಿಡುತ್ತದೆ. ಸಾವಿರಕ್ಕೆ ಇಂತಿಷ್ಟು ಎಂದು ರೆಕವರಿ ಚಾರ್ಜ್ ಅನ್ನು add ಮಾಡಿಕೊಂಡು ಹೋಗುವ ಸಿಸ್ಟಮ್ ಅನ್ನು ಇವೊತ್ತು ನಿಮ್ಮ ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ಇಟ್ಟುಕೊಂಡಿದ್ದಾರೆ. Wherther you pay intime or not, I am bound to pay recovery charges of so much amount. ಇದು ಸಹಕಾರ ಸಂಘವನ್ನು ನಡೆಸುವ ರೀತಿಯೇ? ಇನ್ನು ಮೂರನೆಯದಾಗಿ, ಪಿಎಲ್‌ಡಿ ಬ್ಯಾಂಕ್‌ನ ವ್ಯವಸ್ಥೆ ಹದಗೆಟ್ಟುಬಿಟ್ಟಿದೆ. ಪಿಎಲ್‌ಡಿ ಬ್ಯಾಂಕ್‌ನದು ಏನಾಗಿದೆಯೆಂದರೆ, ಜಿಲ್ಲೆಯ ಒಂದೆರಡು ಬ್ಯಾಂಕ್‌ಗಳನ್ನು ಮಾತ್ರ eligible ಇಟ್ಟುಕೊಂಡು Board of directors elections ಆಗುತ್ತಿದೆ. I demand minimum 50% of the banks are not eligible, ಅಲ್ಲಿಗೆ ನೀವು ರೆಪ್ರಸೆಂಟೇಶನ್ ಹಕ್ಕು ಕೊಡಕೂಡದು. ಯಾರೋ ಒಬ್ಬರು ಬ್ಯಾಂಕುಗಳನ್ನು ಇಟ್ಟುಕೊಂಡು 'ಅವಿರೋಧವಾಗಿ ನಾನು ಗೆದ್ದು ಬಂದೆ, ನಾನು ಗೆದ್ದು ಬಂದೆ' ಎಂದು ಪೇಪರ್‌ಗಳಲ್ಲಿ ಫೋಟೋ ಹಾಕಿಸಿಕೊಳ್ಳುವುದಕ್ಕಲ್ಲ Cooperative movement ಇರುವುದು ನಿಜವಾಗಿಯೂ ನಿಮಗೆ ರಾಜಕೀಯ ಕಳಕಳಿ ಇದ್ದರೆ, ಮಿನಿಮಮ್ ಹತ್ತು ಬ್ಯಾಂಕುಗಳಿರುವ ಜಿಲ್ಲೆಯಲ್ಲಿ ಐದನ್ನಾದರೂ eligible ಇದ್ದವರಿಗೆ ಮಾತ್ರ ಡೈರೆಕ್ಟರ್ ಆಗುವುದಕ್ಕೆ ಲಾಯಕ್ ಅಂತ ಹೇಳಿ ಒಂದು ಎಲೆಕ್ಷನ್ ಆಗುವಂತೆ ಮಾಡಿ. ಇಲ್ಲವೇ, ಈ Borrowing, default system ಎಲ್ಲವನ್ನೂ ತೆಗೆದುಬಿಡಿ. ಎಲ್ಲಾ ಹತ್ತು ಬ್ಯಾಂಕುಗಳೂ ವೋಟು ಹಾಕುವಂತೆ ಮಾಡಿ. ಯಾರ್‍ಯಾರಿಗೆ ಬೇಕು? With great respect to our hon'ble Vishwanathan. ಅಲ್ಲಿಂದ ಶುರುವಾಗಿದ್ದು ಈ ವ್ಯವಸ್ಥೆ ಯಾರ್‍ಯಾರು ಬೇಕೋ ಅವರ ಬ್ಯಾಂಕ್ eligible. ಯಾರು ಬೇಡವೋ ಅವರು eligible ಇಲ್ಲ. ಅವರಲ್ಲಿ ಕೆಲವು Adjustments entry ಆಗುತ್ತದೆ, ಇನ್ನು ಬ್ಯಾಂಕ್‌ನಲ್ಲಿ ಎಂಟ್ರಿ ಆಗುವುದಿಲ್ಲ, ಇದನ್ನು ತಾವು ತಪ್ಪಿಸಲೇಬೇಕು. ಇದರಿಂದ ಕೋ-ಅಪರೇಟಿವ್ ವ್ಯವಸ್ಥೆಗೆ ಬಹಳ ಒಳ್ಳೆಯದಾಗಿದೆ ಅಂತೇನಾದರೂ ತಿಳಿದುಕೊಂಡಿದ್ದರೆ, ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡಿ. ಎರಡನೆಯದಾಗಿ, ಇವೊತ್ತು ಕೆಲವು

ಬ್ಯಾಂಕುಗಳಲ್ಲಿ ಷೇರು ಕೊಡುವುದಿಲ್ಲ. ನಿಮಗೆ ಷೇರು ಕೊಡುವುದಿಲ್ಲ, ಪ್ರೆಸಿಡೆಂಟರು ಒಪ್ಪಬೇಕು, ಡೈರೆಕ್ಟರು ಒಪ್ಪಬೇಕು, ಗುರುಪಾದಪ್ಪನವರು ಒಪ್ಪಿದರೆ ಬೀದರ್‌ನಲ್ಲಿ ಷೇರು, ಇಲ್ಲದಿದ್ದರೆ, ರೈತರಿಗೆ ಷೇರು ಸಿಕ್ಕುವುದಿಲ್ಲ. ಇದು ಯಾರ ಅಪ್ಪನ ಆಸ್ತಿ? ನಾನು ಅವರಿಗೆ (ಗುರುಪಾದಪ್ಪ ನಾಗಮಾರಪಲ್ಲಿ) ಸುಮ್ಮನೆ ಹೇಳಿದೆ. ಅವರ ಬಗ್ಗೆ ನಾನು ಚಾರ್ಜ್ ಮಾಡಲಿಲ್ಲ. ಪಿಎಲ್‌ಡಿ ಬ್ಯಾಂಕುಗಳಲ್ಲಿ ಷೇರು ತೆಗೆದುಕೊಳ್ಳುವ ಕೆಲಸವನ್ನು, TAPCMS ನಲ್ಲಿ ಷೇರು ತೆಗೆದುಕೊಳ್ಳುವ ಕೆಲಸವನ್ನು, ಸೊಸೈಟಿಯಲ್ಲಿ ನನಗೆ ಷೇರು ಬೇಕೆಂದರೆ ಮೆಂಬರ್‌ಶಿಪ್ಸ್ ತೆಗೆದುಕೊಳ್ಳುವ ಜವಾಬ್ದಾರಿಯನ್ನು ನೀವು ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳಿಗೆ ಫಿಕ್ಸ್ ಮಾಡಬೇಕು. If anybody approaches the Assistant Registrar, 'ನಾನು ಒಬ್ಬ ರೈತನಾಗಿದ್ದು, ಇಂತಹ ಸಹಕಾರ ಸಂಘ ನನಗೆ ಷೇರು ಕೊಟ್ಟಿಲ್ಲ ನಾನು ಇಲ್ಲಿ ಖಾತೆದಾರನಾಗಿದ್ದೇನೆ' ಎಂದರೆ ಅವನಿಗೆ ಷೇರು ಕೊಡಿಸುವ ವ್ಯವಸ್ಥೆಯನ್ನು ಈ ಸರ್ಕಾರದವರು ಮಾಡಬೇಕು. ಯಾರೋ 8–10 ಜನರು ಹಿಡಿತದಲ್ಲಿ ಇಡೀ ತಾಲ್ಲೂಕಿನ ಸಹಕಾರಿ ವ್ಯವಸ್ಥೆ ಇಡುವುದು ನ್ಯಾಯವೆಂದು ಅನಿಸುತ್ತದೆಯೇ?

ಶ್ರೀ ಡಿ.ಆರ್.ಪಾಟೀಲ್: ಈಗ ಕ್ರೆಡಿಟ್ ಸೊಸೈಟಿಯಲ್ಲಿ ಆ Facility ಇದೆ. ಅದೇ ನೀವು ಹೇಳಿದಂತೆ ಪಿಎಲ್‌ಡಿ ಬ್ಯಾಂಕ್ ಮತ್ತು ಟಿಎಪಿಸಿಎಂಎಸ್‌ಗೆ ಎಕ್ಸ್‌ಟೆಂಡ್ ಮಾಡಬೇಕು. ಏಕೆಂದರೆ many Government Schemes flow through these two institutions. ಅದು ಕೆಲವರಿಗೆ ಮಾತ್ರ ಸಿಗುವಂತಾಗಬಾರದು. ಅದು ಆಟೊಮ್ಯಾಟಿಕ್ ಆಗಿ ಮೆಂಬರ್‌ಶಿಫ್ ಸಿಗುವಂತೆ You can extend that facility from Credit Societies to PLD Bank and TAPCMS.

ಶ್ರೀ ಜೆ.ಸಿ.ಮಾಧುಸ್ವಾಮಿ: ಇನ್ನು ನಾನು ಎರಡೇ ಎರಡು ಮಾತುಗಳನ್ನು ಮಾನ್ಯ ಸಿಂಧ್ಯಾರವರ ಖಾತೆ ಬಗ್ಗೆ ಮಾತನಾಡಿಬಿಡುತ್ತೇನೆ. ಸರ್, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್.

ಅಧ್ಯಕ್ಷರು: ಏನಿದು?

ಶ್ರೀ ಜೆ.ಸಿ.ಮಾಧುಸ್ವಾಮಿ: ಈಗ ಮಾತನಾಡಿ ಎಂದರೆ ಮಾತನಾಡುತ್ತೇನೆ. ಇಲ್ಲದಿದ್ದರೆ, ಮಾತನಾಡುವುದಿಲ್ಲ.

ಅಧ್ಯಕ್ಷರು: ಏಕೆಂದರೆ ಇನ್ನು ಮಾತನಾಡುವ ಸದಸ್ಯರಿದ್ದಾರೆ. ಬೇಗ ಮುಗಿಸಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ನಿಮ್ಮ ಗಮನಕ್ಕೆ ತರುತ್ತೇನೆ. ನಾನು ಹೇಳುವುದಿಲ್ಲವೆಂದು ಶ್ರೀ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹೇಳಿದೆ.

ಸ್ಪೀಕರ್‌ರವರು ಒಪ್ಪಿಕೊಂಡಿದ್ದಾರೆ. ಮಾತನಾಡಿ' ಎಂದು ಹೇಳಿದ್ದಕ್ಕೆ ನಾವೆಲ್ಲಾ ಎದ್ದಿದ್ದೇವೆ. ನಾವು ಮಾತನಾಡುವುದು ನಿಮಗೆ ಇಷ್ಟವಿಲ್ಲದಿದ್ದರೆ ಬೇಡ.

ಅಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರು ಬೇರೆ ಇಲಾಖೆಗಳ ಬೇಡಿಕೆ ಮೇಲೆ ಮಾತನಾಡುತ್ತಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೇ ಮಾತನಾಡಿ.

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದಂಥ ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ. ಇದುವರೆಗೂ ಬೇಡಿಕೆಗಳ ಸಮಗ್ರ ಚರ್ಚೆಯಾಗಿ ಬಹಳ ದಿನಗಳಾಗಿತ್ತು. ಅದರಲ್ಲಿ ಕೈಗಾರಿಕೆ ಬೇಡಿಕೆ ಬಹಳ ಪ್ರಾಮುಖ್ಯವಾದದ್ದು. ನಾನು ಬಹಳ ವರ್ಷದಿಂದ ಇದರ ಬಗ್ಗೆ ಗಮನ ಇಟ್ಟಿದ್ದೇನೆ. ಕರ್ನಾಟಕದ ಮೊದಲನೆ ಕೈಗಾರಿಕಾ ಮಂತ್ರಿ ಕೆ.ಮಲ್ಲಪ್ಪನವರು. ಪ್ರಪಥಮ ಕೈಗಾರಿಕಾ ಮಂತ್ರಿ ಕೆ. ಮಲ್ಲಪ್ಪನವರು ಕೊಡಗಿನವರು, ಈಗ ಮಾನ್ಯ ಸಿಂಧ್ಯಾರವರು ಕೆ.ಮಲ್ಲಪ್ಪನವರಿಂದ ಸಿಂಧ್ಯರವರು ಬಹಳ ಜನ ಕೈಗಾರಿಕಾ ಮಂತ್ರಿಗಳಾಗಿ ಹೋಗಿದ್ದಾರೆ. ಕೈಗಾರಿಕಾ ಇತಿಹಾಸದಲ್ಲಿ ಅಧಿಕಾರಿ ವರ್ಗದವರು ಟಿ.ಶಾಮಣ್ಣ ಎಂದು, ಬಹುಶಃ ಬಹಳ ಹೆಚ್ಚಿನ ರೀತಿಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ. ಸಿದ್ದಲಿಂಗಪ್ಪ ಎಂದು ಅವರು ಕೈಗಾರಿಕಾ ಬೆಳವಣಿಗೆಯ ಬಗ್ಗೆ ಒಳ್ಳೆಯ ಆರಂಭವನ್ನು ಮಾಡಿದ್ದಾರೆ. ಶಿವನಂಜಪ್ಪ, ಡಾ॥ಟಿ.ತಿಮ್ಮಯ್ಯ, ಮುದ್ದಪ್ಪ, ಇಷ್ಟು ಜನ ಕೈಗಾರಿಕಾ ಬೆಳವಣಿಗೆಯ ಬಗ್ಗೆ ತಮ್ಮದೇ ಆದಂಥ ಕೊಡುಗೆಯನ್ನು ಕೊಟ್ಟಿದ್ದಾರೆ. ಕೈಗಾರಿಕೆಯ ವಿಚಾರದಲ್ಲಿ ಮಾನ್ಯ ಸಿಂಧ್ಯಾರವರೇ ನಾನು ಹೇಳಿದೆ, ಮೊದಲನೆಯ ಕೈಗಾರಿಕಾ ಮಂತ್ರಿ ಕೆ.ಮಲ್ಲಪ್ಪನವರು ಕೊಡಗಿನವರು, ಆಗ ಕರ್ನಾಟಕ ಎಂದು ಹೆಸರು ಇರಲಿಲ್ಲ, ವಿಶಾಲ ಮೈಸೂರು ಎಂದು ಇತ್ತು. ನಿಜ ಲಿಂಗಪ್ಪನವರ ಮೊದಲನೆ ಸಚಿವಸಂಪುಟದಲ್ಲಿ ಕೆ.ಮಲ್ಲಪ್ಪನವರು, ಈಗ ಸಿಂಧ್ಯರವರು ಅಲ್ಲಿಂದ ಇಲ್ಲಿಯವರೆಗೆ ಮಂತ್ರಿಗಳಾಗಿ ಬಂದಿದ್ದಾರೆ. ಆವತ್ತಿನ ಬೆಳವಣಿಗೆಯೇ ಬೇರೆ ಇವತ್ತಿನ ಬೆಳವಣಿಗೆಯೇ ಬೇರೆ. ತಮಗೆ ಅದರ ಇತಿಹಾಸ ಗೊತ್ತಿರಬಹುದು, ಟಿ.ಶಾಮಣ್ಣ ಮತ್ತು ಶಿವನಂಜಪ್ಪ, ತಿಮ್ಮಯ್ಯ ಮತ್ತು ಮುದ್ದಪ್ಪ, ಇವರೆಲ್ಲರೂ ಬಹಳ ಕೊಡುಗೆ ಕೊಟ್ಟಿದ್ದಾರೆ. ಆವಾಗ ಏಶಿಯಾಟಿಕ್ ಬಿಲ್ಡಿಂಗ್‌ನಲ್ಲಿ ನಿಮ್ಮ ಕೈಗಾರಿಕಾ ಆಫೀಸ್ ಅಲ್ಲಿ ಒಂದು ಸಣ್ಣದು, ಸಾಗರ್ ಟಾಕೀಸ್, ಪಕ್ಕದಲ್ಲಿ ಮಾತ್ರ ಇದ್ದಂಥದ್ದು. ಈಗ ವಿಶಾಲವಾಗಿ ಕರ್ನಾಟಕದಲ್ಲಿ ಕೈಗಾರಿಕೆ ಬೆಳೆದಿದೆ. ಕರ್ನಾಟಕಕ್ಕೆ ಕೇಂದ್ರ ಕೈಗಾರಿಕೆಗಳು ಬರಬೇಕಾಗಿದ್ದರೆ, ಕೆ.ಸಿ.ರೆಡ್ಡಿಯವರು, ಕ್ಯಾಸಂಬಳ್ಳಿ ಚಂಗಲ್‌ರಾಯ ರೆಡ್ಡಿಯವರು ಪ್ರಥಮ ಮುಖ್ಯಮಂತ್ರಿಯಾಗಿದ್ದಾಗ ಜವಹರ್‌ಲಾಲ್ ನೆಹರುರವರು ಕೆ.ಸಿ.ರೆಡ್ಡಿಯವರ ವಿಶ್ವಾಸಕ್ಕೆ ಪ್ರೀತಿಗೆ ಈ ರಾಜ್ಯದಲ್ಲಿ ಹೆಚ್.ಎಂ.ಟಿ. ಕಾರ್ಖಾನೆ, ಐ.ಟಿ.ಐ.

ಕಾರ್ಖಾನೆ, ಹೆಚ್.ಎ.ಎಲ್. ಇವೆಲ್ಲಾ ಕೇಂದ್ರ ಕಾರ್ಖಾನೆಗಳು ಕೆ.ಸಿ.ರೆಡ್ಡಿಯವರ ಕಾಲದಲ್ಲಿ ಕರ್ನಾಟಕಕ್ಕೆ ಬಂದಂಥದ್ದು. ಇದು ಒಂದು ಹೊಸ ದಿಕ್ಕನ್ನೇ ಆರಂಭ ಮಾಡಿತ್ತು. ಅದಾದಮೇಲೆ 1966 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸುಮಾರು ನಲವತ್ತು ವರ್ಷ ಕೈಗಾರಿಗಳಿಗೆ ಜಮೀನನ್ನು ಪಡೆದು, ಸ್ಥಳೀಯರಿಂದ, ರೈತರಿಂದ ಜಮೀನನ್ನು ಪಡೆದು ಅಭಿವೃದ್ಧಿಪಡಿಸಿ ಕೈಗಾರಿಕೆಗಳಿಗೆ ಕೊಡತಕ್ಕದ್ದು ಇದರ ಮೂಲ ಉದ್ದೇಶ, 1966ರಲ್ಲಿ ಇದಕ್ಕೆ ಕಾಯ್ದೆ ಬಂತು, ಇದುವರೆಗೆ 96 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಮಾಡಿದ್ದಾರೆ. 30,002 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದಾರೆ, 28,421 ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ. ಸುಮಾರು 17,163 ಎಕರೆ ಪ್ರದೇಶವನ್ನು 9,944 ಘಟಕಗಳಿಗೆ ಕೊಡಲಾಗಿದೆ. 2004-05ನೇ ಸಾಲಿನಲ್ಲಿ ಪರಿಹಾರಕ್ಕಾಗಿ 105.99 ಕೋಟಿ ರೂಪಾಯಿಯನ್ನು ಪರಿಹಾರವಾಗಿ ಕೊಟ್ಟಿದ್ದಾರೆ. ಖರ್ಚು ಮಾಡಿ ಅಭಿವೃದ್ಧಿಪಡಿಸಿದ ಭೂಮಿ 494 ಘಟಕಗಳಿಗೆ ಹಂಚಿದ್ದಾರೆ. ಇದನ್ನೆಲ್ಲಾ ನೋಡಿದಾಗ ಇತ್ತೀಚಿನ ದಿನಗಳಲ್ಲಿ ಯಾವ ಉದ್ದೇಶಕ್ಕಾಗಿ ಈ ಒಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಆರಂಭವಾಯಿತು ಆ ಉದ್ದೇಶ ಈಡೇರುತ್ತಿಲ್ಲ. ರೈತರಿಗೂ ಮೋಸ, ಸಂಸ್ಥೆ ಬಹಳ ಸದುದ್ದೇಶವಾದಂಥ ಸಂಸ್ಥೆ, ಘನವಾದ ಉದ್ದೇಶದಿಂದ ಆರಂಭವಾದದ್ದು. ಇಲ್ಲಿ ರೈತರಿಗೆ ಮೋಸ ಮಾಡಿ ಜಮೀನನ್ನು ಪಡೆದು ಐ.ಟಿ. ಪಾರ್ಕ್‌ಗಳಿಗೆ ಕೊಡತಕ್ಕ ಉದ್ದೇಶ ಇದರಲ್ಲಿ ಇಲ್ಲವೇ ಇಲ್ಲ. ಬರೀ ಕೈಗಾರಿಕೆಗಳಿಗೆ ಮಾತ್ರ ಅಭಿವೃದ್ಧಿ ಪಡಿಸಿದಂಥ ಭೂಮಿಯನ್ನು ಹಂಚತಕ್ಕಂಥ ವ್ಯವಸ್ಥೆ ಇರುವುದು, ಇದು ಕೇವಲ ಕೈಗಾರಿಕೆಗಳಿಗೆ ಮಾತ್ರ ಕೊಡುವುದಕ್ಕೆ. ಐ.ಟಿ.ಪಾರ್ಕ್‌ಗಳಿಗಲ್ಲ. ಎಷ್ಟು ಐ.ಟಿ. ಪಾರ್ಕ್‌ಗಳಿಗೆ ಇದನ್ನು ಕೊಟ್ಟಿದ್ದೀರಿ? ಇದರ ಬಗ್ಗೆ ಸಮಗ್ರವಾಗಿ ತಮ್ಮ ಉತ್ತರದಲ್ಲೂ ಹೇಳಬೇಕು, ಇದರ ಬಗ್ಗೆ ಒಂದು ತನಿಖೆಯಾಗಬೇಕು. ಐ.ಟಿ.ಪಾರ್ಕ್‌ನವರು ಯಾರ್‍ಯಾರು? ಅವರ ಹೆಸರುಗಳೇನು? ಅವರ ಉದ್ದೇಶವೇನು? ಐ.ಟಿ.ಪಾರ್ಕ್‌ಗಳಿಗೆ ನೀವು ಎಷ್ಟು ಭೂಮಿಯನ್ನು ರೈತರಿಂದ ವಶಪಡಿಸಿಕೊಂಡು ರೈತರ ಬಾಯಿಗೆ ಸಣ್ಣ ಒಂದು ಸಿಹಿಯನ್ನು ನಾಲಿಗೆಗೆ ಹಚ್ಚಿ ಲೂಟಿ ಮಾಡತಕ್ಕಂಥ ವ್ಯವಸ್ಥೆ ಈ ಸಂಸ್ಥೆಗೆ ಆಗಬಾರದು. ಈಗ ಇತ್ತೀಚೆಗೆ ಒಳ್ಳೆಯ ಅಧಿಕಾರಿಗಳು ಬಂದಿದ್ದಾರೆ ಆ ಸಂಸ್ಥೆಯಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ. ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅದರ ಬಗ್ಗೆ ನಾನು ಬಹಳ ಸಂತೋಷಪಡುತ್ತೇನೆ. ಕೆಲವು ಒಳ್ಳೆಯ ದಕ್ಷ ಅಧಿಕಾರಿಗಳಿದ್ದಾರೆ. ಅದರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ಆದರೆ ನನಗನ್ನಿಸುತ್ತದೆ, ಯಾರಿಗೋಸ್ಕರ ಯಾವ ಉದ್ದೇಶಕ್ಕೋಸ್ಕರವಾಗಿ ಈ ಕರ್ನಾಟಕ ಕೈಗಾರಿಕಾ

ಪ್ರದೇಶಾಭಿವೃದ್ಧಿ ಮಂಡಳಿ ರಚನೆಯಾಯಿತು ಆ ಉದ್ದೇಶವನ್ನು ಮೂಲೆಗುಂಪು ಮಾಡಿ ರೈತರಿಂದ, ಅಮಾಯಕ ರೈತರಿಂದ ನೀವು ಜಮೀನುಗಳನ್ನು ಪಡೆದು ಅವರಿಗೆ ಯಾವುದೋ ರೂಪದಲ್ಲಿ ಹಣವನ್ನು ನೀಡಿ ಆ ಜಮೀನುದಾರರಿಗೆ ಯಾವುದೇ ಸೌಲಭ್ಯಗಳನ್ನು ಕೊಡದೆ ನೀವು ಐ.ಟಿ. ಪಾರ್ಕ್‌ನವರಿಗೆ ನೀರು, ರಸ್ತೆ, ಒಳಚರಂಡಿ ಎಲ್ಲಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಅವರಿಗೆ ಕೊಡತಕ್ಕಂಥ ಉದ್ದೇಶ ಈ ನೀತಿಯಲ್ಲಿದೆಯೇ? ನಿಮ್ಮ ಕಾಯ್ದೆಯಲ್ಲಿ ಇಲ್ಲ. 1966ನೇ ಕಾಯ್ದೆಯಲ್ಲಿ ನೋಡಿದಾಗ ಐ.ಟಿ.ಪಾರ್ಕ್‌ಗೆ ಕೊಡತಕ್ಕಂಥ ನೀತಿ ಇಲ್ಲ. ನಾನು ತಮಗೆ ಹೇಳುತ್ತೇನೆ. ಸುಮಾರು ಇಪ್ಪತ್ತು ವರ್ಷದ ಈ ಇಲಾಖೆಯ ಹಾಗೂ ಈ ಮಂಡಳಿಯ ಆಡಳಿತವನ್ನು ನೀವು, ನಾನು ನಿಮ್ಮ ಬಗ್ಗೆ ಬಹಳ ಅಭಿಮಾನವನ್ನು ಇಟ್ಟುಕೊಂಡಿದ್ದೇನೆ. ತನಿಖೆ ಮಾಡಿಸುತ್ತೀರಾ? ಕನಿಷ್ಠ 20 ವರ್ಷ 40 ವರ್ಷದ್ದು ಬೇಡ, ಕನಿಷ್ಠ 20 ವರ್ಷದಲ್ಲಿ ಎಷ್ಟು ಭೂಮಿಯನ್ನು ವಶಪಡಿಸಿಕೊಂಡಿದ್ದೀರಿ? ಯಾರ್ಯಾರಿಗೆ ಹಂಚಿದ್ದೀರಿ? ಯಾವ ಉದ್ದೇಶಕ್ಕಾಗಿ ವಶಪಡಿಸಿಕೊಂಡಿರಿ? ಇದನ್ನು ಸಮಗ್ರವಾಗಿ ವಶಪಡಿಸಿಕೊಂಡ ಮೇಲೆ ಎಷ್ಟು ಜನರಿಗೆ ಹಿಂದಕ್ಕೆ ಕೊಟ್ಟಿದ್ದೀರಿ? ಯಾವ ರೀತಿ ಅದನ್ನು ಹಿಂದಕ್ಕೆ ಕೊಟ್ಟಿರಿ? ವಶಪಡಿಸಿಕೊಂಡಿದ್ದು ಯಾವಾಗ? ಸಮಗ್ರವಾಗಿ ಕನಿಷ್ಠ 20 ವರ್ಷದ ತನಿಖೆಯನ್ನು ತಾವು ಮಾಡಿಸುವುದಾದರೆ ನಾನು ಸಂತೋಷಪಡುತ್ತೇನೆ. ನಿಮ್ಮ ಬಗ್ಗೆ ನನಗೆ ಬಹಳ ಅಪಾರವಾದಂಥ ಗೌರವ ಬರುತ್ತದೆ, ಸಂತೋಷ ಬರುತ್ತದೆ. ಇವತ್ತು ಆ ಪರಿಸ್ಥಿತಿ ಇಲ್ಲ. ಲೂಟಿಯಾಗಿದೆ. ಸಮಗ್ರ ಲೂಟಿಯಾಗಿದೆ. ದರೋಡೆಯಾಗಿದೆ. ಐ.ಟಿ.ಪಾರ್ಕ್‌ಗಳು ಯಾರು? ಐ.ಟಿ.ಪಾರ್ಕ್‌ಗಳ ಹೆಸರಿಗೆ ಅವರು ಮಾಡಿರತಕ್ಕಂಥ ದ್ರೋಹ, ಲೂಟಿ ಇಡೀ ರಾಷ್ಟ್ರವೇ ತಲೆತಗ್ಗಿಸಬೇಕು, ರಾಜ್ಯವೇ ತಲೆತಗ್ಗಿಸಬೇಕು ಅಂಥ ಲೂಟಿ ದರೋಡೆ ನಡೆದು ಹೋಗಿದೆ. ನಿಮ್ಮ ಕೆಲಸವೇನು? ಕೈಗಾರಿಕಾ ಅಭಿವೃದ್ಧಿ ಅದನ್ನು ಬಿಟ್ಟು ಐ.ಟಿ.ಪಾರ್ಕ್ ಕಂಪನಿಯವರಿಗೆ ನೀವು ಭೂಮಿಯನ್ನು ಹಂಚುವುದಾದರೆ ಇದರಲ್ಲಿ ಮಾನ್ಯ ಸಿಂಧ್ಯಾರವರೆ, ನೀವು ತಪ್ಪಿತಸ್ಥರಾಗಬೇಡಿ, ಖಂಡಿತ ಆಗಬೇಡಿ. 20 ವರ್ಷದ್ದು ಸಮಗ್ರವಾಗಿ ಉಚ್ಚನ್ಯಾಯಲಯದ ನ್ಯಾಯಧೀಶರನ್ನು ನೇಮಕ ಮಾಡಿ, ನಿವೃತ್ತ ನ್ಯಾಯಧೀಶರಾಗಲಿ. ಇದು ಯಾರ್ಯಾರಿಗೆ ಕೊಟ್ಟಿದ್ದಾರೆ? ಏನೇನಾಗಿದೆ? ಇದರ ಸಮಗ್ರವಾದ ತನಿಖೆ ಮಾಡಿ ಈ ಸದನದ ಮುಂದೆ ಮಂಡಿಸಿ ಒಂದು ವರದಿಯನ್ನು ತಾವು ಕೊಡಿ. ನಾನು ಹೇಳುತ್ತೇನೆ ನೂರಾರು ಕೋಟಿ ರೂಪಾಯಿ ಹಗಲು ದರೋಡೆಯಾಗಿದೆ. ಲೂಟಿಯಾಗಿದೆ ಅನ್ಯಾಯವಾಗಿದೆ. ಈಗ ಬಂದಿರತಕ್ಕಂಥ ಅಧಿಕಾರಿಗಳ ಹೆಸರನ್ನು ನಾನು ಹೇಳಬೇಕಾಗಿಲ್ಲ. ಉತ್ತಮವಾದಂಥ ಅಧಿಕಾರಿಗಳು ಸಧ್ಯಕ್ಕೆ ನಿಮ್ಮಲ್ಲಿದ್ದಾರೆ.

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಪೀಣ್ಯ ಎಂದು ಬರುತ್ತದೆ. ಇಡೀ ಏಷ್ಯಾದಲ್ಲಿ 4000 Small Scale Industries ಇದ್ದಾವೆ. ಬಹಳ ಹಿಂದೆ, ಹದಿನೈದು ಇಪ್ಪತ್ತು ವರ್ಷದ ಹಿಂದೆ ಒಂದು ಲೇಔಟ್ ಮಾಡಿದರು. ಬಂದಂಥ ಅಧಿಕಾರಿಗಳು ಇರಬಹುದು. ಬಂದಂಥ ಮಂತ್ರಿಗಳು ಇರಬಹುದು. ಏನು ಪಾರ್ಕು ಮತ್ತು ಸಿ.ಎ.ಗೆ ಜಾಗ ಬಿಟ್ಟಿದ್ದರು, ಮೊನ್ನೆ ಕಳೆದ ನಾಲ್ಕೈದು ವರ್ಷದ ಕೆಳಗೆ ಅಲ್ಲಿ ಒಂದು ವಾಟರ್ ಟ್ಯಾಂಕ್ ಇತ್ತು, ಅದನ್ನೂ ಇವತ್ತು ಸೈಟುಗಳನ್ನು ಮಾಡಿ ಕಮರ್ಷಿಯಲ್ ಕಾಂಪ್ಲೆಕ್ಸ್ ಮಾಡಿಬಿಟ್ಟಿದ್ದಾರೆ. ನೀರನ್ನು ಶೇಖರಣೆ ಮಾಡತಕ್ಕಂಥ ಒಂದು ವಾಟರ್‌ಟ್ಯಾಂಕ್ ಇವತ್ತಿಗೂ ಇದೆ, ಓವರ್ ಹೆಡ್ ಟ್ಯಾಂಕೂ ಇದೆ, ಶೇಖರಣೆ ಮಾಡತಕ್ಕ ಟ್ಯಾಂಕ್ ಎರಡೂ ಇದೆ. ಆ ಪೂರ್ತಿ ಏರಿಯಾವನ್ನು ಇವತ್ತು ಪರಭಾರೆ ಮಾಡಿ ಇವತ್ತು ಅಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ಬಂದು ಬಿಟ್ಟಿದೆ. ಅದರ ಬಗ್ಗೆ ಸಹ ಮಾನ್ಯ ಮಂತ್ರಿಗಳು ಗಮನಕೊಡಬೇಕು.

ಶ್ರೀ ವಾಟಾಳ್ ನಾಗರಾಜ್: ನಾನು ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡಿರುತ್ತೇನೆ. ಸ್ವಲ್ಪ ಶ್ರದ್ಧೆ ಇದೆ. ಇಲಾಖೆಯಲ್ಲಿ ಕೆಲಸ ಮಾಡಬೇಕು ಎಂಬ ಉತ್ಸಾಹ ಇದೆ. ತಾವು ಬಹಳ ಚಾಣುಕ್ಯರು ಎಂಬ ಬಗ್ಗೆ ಕೂಡ ನಾನೂ ಒಪ್ಪುತ್ತೇನೆ. ಅದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ತಾವು ವಿರೋಧ ಪಕ್ಷದಲ್ಲೂ ಕೆಲಸ ಮಾಡಿದ್ದೀರಿ, ಆ ಕಡೆಯೂ ಕೆಲಸ ಮಾಡಿದ್ದೀರಿ. ನಾನೇನು ನಿಮ್ಮನ್ನು ತೆಗಳಬೇಕೆಂದೇನೂ ಇಲ್ಲ. 1966 ರಿಂದ ಇಲ್ಲಿಯವರೆಗೆ 30,002 ಎಕರೆ ಜಮೀನನ್ನು ನೀವು ವಶಪಡಿಸಿಕೊಂಡಿದ್ದೀರಿ. ಈ ಜಮೀನು ಯಾರ್‍ಯಾರಿಗೆ ಹೋಗಿದೆ? ನಿಮ್ಮ ಉದ್ದೇಶ ಇದ್ದವರಿಗೆ ಬಳಸಿದ್ದೀರಾ? ಬೇರೆಯವರಿಗೆ ಕೊಟ್ಟಿದ್ದೀರಾ? ನಷ್ಟ ಎಷ್ಟು ಆಗಿದೆ? ಭೂಮಿಯ ಬೆಲೆ ಎಷ್ಟು? ರೈತರಿಂದ ಕೊಂಡದ್ದು ಎಷ್ಟಕ್ಕೆ? ಮಾರಿದ್ದು ಎಷ್ಟುಕ್ಕೆ? ಅವರಿಗೆ ಕೊಟ್ಟದ್ದು ಎಷ್ಟಕ್ಕೆ? ಅವರು ಅದನ್ನು ಯಾವುದಕ್ಕೆ ಮಾರುತ್ತಿದ್ದಾರೆ? ನಿವೇಶನಗಳನ್ನಾಗಿ ಮಾರುತ್ತಿದ್ದಾರೆ. IT Park ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ದೊಡ್ಡ ದಂಧೆ ನಡೆಯುತ್ತಿದೆ. IT Park ಹೆಸರಿನಲ್ಲಿ ಭಾರಿ ದರೋಡೆ, ಹಗಲು ದರೋಡೆ ನಡೆಯುತ್ತಿದೆ. ಇದು ಸಂಪೂರ್ಣ ತೆಗೆಯಿರಿ. ಹೊರಗಡೆ, ಯಾರ್‍ಯಾರು ಅದರಲ್ಲಿ ಬರುತ್ತಾರೆಂದು ನೋಡೋಣ. ಕಂಪ್ಲೀಟ್ ಅವರ ಸಮಗ್ರ ಜಾತಕ ಹೊರಗಡೆ ಬರಲಿ ಅನ್ನತಕ್ಕಂಥ ಮಾತನ್ನು ತಮಗೆ ಹೇಳುತ್ತಿದ್ದೇನೆ. ಸಣ್ಣ ಕೈಗಾರಿಕೆಗಳ ಬಗ್ಗೆ ಬಹಳ ಮೊಸಳೆ ಕಣ್ಣೀರು ಸುರಿಸುವುದು ಬೇಡ. ಸಣ್ಣ ಕೈಗಾರಿಕೆಗಳು, ಸಾವಿರಾರು ಕೈಗಾರಿಕೆಗಳು ಮುಚ್ಚಿ ಹೋಗಿವೆ. ಸಾವಿರಾರು ಕೈಗಾರಿಕೆಗಳು ಒಂದಲ್ಲ, ಎರಡಲ್ಲ, ಸಾವಿರಾರು ಕೈಗಾರಿಕೆಗಳು. ಅವು ಪ್ರಜ್ಞಾಹೀನ ಸ್ಥಿತಿಯಲ್ಲಿವೆ. ನೀವು ಎಷ್ಟೇ

ಆಮ್ಲಜನಕ ಕೊಟ್ಟರೂ ಅವು ಬದುಕುವ ಮಟ್ಟದಲ್ಲಿ ಇಲ್ಲ. ಆದ್ದರಿಂದ ಸಣ್ಣ ಕೈಗಾರಿಕೆಗಳ ಬೆಳವಣಿಗೆ ಬಗ್ಗೆ ತಾವು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇದನ್ನು ತಾವು ಯಾವಾಗ ಮಾಡುತ್ತೀರಿ? ಇದರ ಬಗ್ಗೆ ಏನು ಯೋಜನೆ ಇಟ್ಟುಕೊಂಡಿದ್ದೀರಿ? ಸಣ್ಣ ಕೈಗಾರಿಕೆಗಳನ್ನು ಉಳಿಸುವುದಕ್ಕೆ, ಸಣ್ಣ ಕೈಗಾರಿಕೆಗಳ ಜೀವವನ್ನು ಉಳಿಸುವುದಕ್ಕೆ ಏನು ಯೋಜನೆಯನ್ನು ತಾವು ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಕೈಗಾರಿಕೆಗಳು ಎಂದರೆ, ಬರೇ ಬೆಂಗಳೂರೇ ಅಲ್ಲ, ಈ ಬೆಂಗಳೂರು ನಗರ ಇಂದು ವಿಷಯ ನಗರವಾಗಿದೆ. ಇದೊಂದು ರೀತಿ ಬೆಂಗಳೂರು ನಗರ ಪ್ರತಿ ನಿತ್ಯ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 1 ಗಂಟೆಯವರೆಗೂ ವಿಷವನ್ನೇ ಉಗುಳುತ್ತಿದೆ, ವಿಷವನ್ನೇ ಹೊರಗೆ ಹಾಕುತ್ತಿದೆ. ಬೆಂಗಳೂರಿನ ಜನ ಒಂದು ರೀತಿ ಪಾಪ ಮಾಡಿದ್ದಾರೆ. ಬೆಂಗಳೂರಿನ ಜನಕ್ಕೆ ಸಮಗ್ರ ನೈರ್ಮಲ್ಯ ಇಲ್ಲ, ಬೆಂಗಳೂರಿನ ಜನಕ್ಕೆ ಪರಿಸರ ಇಲ್ಲ, ಬೆಂಗಳೂರಿನ ಜನಕ್ಕೆ ಉತ್ತಮ ಗಾಳಿ ಇಲ್ಲ, ಬೆಂಗಳೂರಿನ ಜನಕ್ಕೆ ಉತ್ತಮ ವಾತಾವರಣ ಇಲ್ಲ. ಕಾರಣವೇನು? ಎಲ್ಲಾ ಬೆಂಗಳೂರಿನಲ್ಲೇ ಇರುವಂತಹ ಕೈಗಾರಿಕೆಗಳಿಂದಾಗಿ ಆ ರೀತಿ ಆಗಿದೆ. ಆ ಕೈಗಾರಿಗಳು ತಮ್ಮಲ್ಲಿ ತಯಾರಾದಂತಹ ಮಾಲಿನ್ಯವಾದಂತಹ ವಸ್ತುಗಳನ್ನೆಲ್ಲಾ ಹೊರಗಡೆ ಬಿಡುತ್ತಿವೆ. ಅವುಗಳಿಂದ ಬರತಕ್ಕಂಥ ಹೊಗೆ, ಮಾಲಿನ್ಯ ಇದೆಲ್ಲವೂ ಬೆಂಗಳೂರು ವಾತಾವರಣ ಕೆಡಲು ಕಾರಣವಾಗಿದೆ. ಸಮಗ್ರವಾಗಿ ಇನ್ನು ಹತ್ತು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಒಂದೊಂದು ಸಾರಿ ಸಾವಿರಾರು ಜನ ಸಾಯತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕಡ್ಡಾಯವಾಗಿ ಇನ್ನು ಮೇಲೆ ಬೆಂಗಳೂರಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು ಬೇಡ. ಬೆಂಗಳೂರಿನ ಸುತ್ತ ಯಾವುದೇ ಕೈಗಾರಿಕೆಗಳು ಕೊಡುವುದಿಲ್ಲ ಎಂದು ಸರ್ಕಾರ ಕಡ್ಡಾಯವಾಗಿ ಪ್ರಾಮಾಣಿಕವಾಗಿ ಈ ಕೆಲಸ ಮಾಡಬೇಕು. ನೀವೇನು ಮಾಡಬೇಕು? ಬೇರೆ ಬೇರೆ ಜಿಲ್ಲೆಗಳಿಗೆ ಕಳುಹಿಸಿ ಅನೇಕ ಜಿಲ್ಲೆಗಳಿವೆ, 27 ಜಿಲ್ಲೆಗಳಿವೆ. ಅಲ್ಲಿ ತಾವು ಕೈಗಾರಿಕೆಗಳನ್ನು ಮಾಡಿ. ಯಾರೇ ಬಂದರೂ ಬೆಂಗಳೂರಿಗೆ ಇನ್ನು ಮುಂದೆ ನಾವು ಕೊಡುವುದಿಲ್ಲ, ಬೆಂಗಳೂರು ಮುಗಿದಿದೆ ಎಂದು ಹೇಳಿ. ಏನಾಗಿದೆ ಬೆಂಗಳೂರು? ಬೆಂಗಳೂರು-ಕನಕಪುರ, ಬೆಂಗಳೂರು-ಹೊಸಕೋಟೆ, ಬೆಂಗಳೂರು-ಆನೇಕಲ್, ಬೆಂಗಳೂರು-ಬಿಡದಿ, ಬೆಂಗಳೂರು-ನೆಲಮಂಗಲ ಎಲ್ಲಾ ಏನಾಗಿದೆ? ಇನ್ನು ಐದು ವರ್ಷಗಳಲ್ಲಿ ಬೆಂಗಳೂರಿನ ಜನಸಂಖ್ಯೆ ಒಂದೂವರೆ ಕೋಟಿಯಾಗುತ್ತದೆ. ಒಂದೂವರೆ ಕೋಟಿ ಜನಸಂಖ್ಯೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ. ಇದರೊಂದಿಗೆ ಈ ಕೈಗಾರಿಕೆಗಳ ಮಾಲಿನ್ಯ ಇದರಿಂದ ಪರಿಸ್ಥಿತಿ ತೀರಾ ಹದಗೆಡುತ್ತದೆ. ಬೆಂಗಳೂರು

ಅಗ್ನಿಕುಂಡವಾಗುತ್ತದೆ. ನಿಮ್ಮ ಕಾಲದಲ್ಲಿ ಸಮಗ್ರ ಮಸೂದೆ ತಂದು, ಒಂದೂ ಕೈಗಾರಿಕೆಗಳನ್ನು ಇನ್ನು ಮೇಲೆ ನಾವು ಇಲ್ಲಿಗೆ ಕೊಡುವುದಿಲ್ಲ, ಏನೇ ಇದ್ದರೂ ಬೇರೆ ಕಡೆಗೆ ಕೊಡುತ್ತೇವೆ ಎಂದು ಮಾಡಬೇಕು. ಮೊನ್ನೆ ತಾವು ಕನಕಪುರದಲ್ಲಿ ಅಭಿವೃದ್ಧಿ ಪಡಿಸುವ ಬಗ್ಗೆ ಹೇಳಿದ್ದೀರಿ, ಸಂತೋಷ. ನಾನು ಹೇಳುತ್ತಿದ್ದೇನೆ. ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ, ಅಲ್ಲಿಗೆ ಕೈಗಾರಿಕೆಗಳನ್ನು ಕೊಡಿ. 10 ಸಾವಿರ ಜನ ಕೆಲಸ ಮಾಡತಕ್ಕ ಕೈಗಾರಿಕೆಗಳನ್ನು ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರಕ್ಕೆ ಕೊಡಿ. ಬೆಳಗಾವಿಗೆ ಕೊಡಿ. ಏಕೆಂದರೆ, ಬೆಳಗಾವಿಯಲ್ಲಿ ಕನ್ನಡಿಗರ ಸಂಖ್ಯೆಯೂ ಜಾಸ್ತಿಯಾಗಬೇಕು, ಕನ್ನಡಿಗರಿಗೆ ಕೆಲಸವನ್ನೂ ಕೊಡಬೇಕು. ಬೆಳಗಾವಿಯಲ್ಲಿ ನೀವು, ಕನಿಷ್ಟ 30 ಸಾವಿರ ಜನರ ಸಂಖ್ಯೆಯುಳ್ಳ ಒಂದು ಹತ್ತು ಕಾರ್ಖಾನೆಗಳನ್ನು ಕೊಡಿ. ಇದರಿಂದ ನನಗನ್ನಿಸುತ್ತದೆ, ಅಚ್ಚ ಕನ್ನಡದ 60 ಸಾವಿರ ಮತದಾರರು ಬರುತ್ತಾರೆ. ನನಗನ್ನಿಸುತ್ತದೆ. ಗಡಿ ಸಮಸ್ಯೆ ಸಮಗ್ರವಾಗಿ ಮುಗಿದೇ ಹೋಗುತ್ತದೆ. ಯಾರೂ ಬೇಕಾಗಿಲ್ಲ. ಅಲ್ಲಿ ಮಹಾಜನ ಬೇಕಾಗಿಲ್ಲ. ಯಾವ ಜನವೂ ಬೇಕಾಗಿಲ್ಲ. ಇದೇ ಸಾಕು. ಬುದ್ಧಿವಂತಿಕೆಯಿಂದ ನೀವು 30 ಸಾವಿರ ಜನ ಕೆಲಸ ಮಾಡತಕ್ಕಂಥ, ಅಚ್ಚ ಕನ್ನಡಿಗರಿಗೆ ಕೆಲಸ ಕೊಡತಕ್ಕಂಥ ಕೈಗಾರಿಕೆಗಳನ್ನು ಬೆಳಗಾವಿ ನಗರದ ಸುತ್ತಮುತ್ತ ನೀವು ಕೊಡಿ. ಅವರಿಗೆ ಸಂಪೂರ್ಣವಾದಂತಹ ವ್ಯವಸ್ಥೆ ಕೊಡಿ, ಸಂಪೂರ್ಣವಾದಂತಹ ಸವಲತ್ತು ಕೊಡಿ, ಇಡೀ ಸಂಸಾರಗಳಿಗೆ ಮನೆಗಳನ್ನು ಕಟ್ಟಿಸಿಕೊಡಿ. ನನಗನ್ನಿಸುತ್ತದೆ. ಸಮಸ್ಯೆ ಬಗೆಹರಿದೇ ಹೋಯಿತು. ಆದ್ದರಿಂದ ಏನು ನಿಮ್ಮ ಉದ್ದೇಶ ಅದು ಸಮಗ್ರವಾಗಿ ಈಡೇರುತ್ತದೆ ಅನ್ನತಕ್ಕಂಥ ಮಾತನ್ನು ನಾನು ತಮಗೆ ಹೇಳುತ್ತೇನೆ. ಹಿಂದುಳಿದ ಗಡಿಪ್ರದೇಶದ ಚಾಮರಾಜನಗರಕ್ಕೆ ತಾವು ಸಮಗ್ರವಾಗಿ ಹತ್ತು ಸಾವಿರ ಜನ ಕೆಲಸ ಮಾಡತಕ್ಕಂಥ ಕೈಗಾರಿಕೆಗಳನ್ನು ಕೊಡಿ. ನಾವು ಸ್ವಾಗತ ಮಾಡುತ್ತೇವೆ. ಇದಕ್ಕಾಗಿ ನೀವು ಯಾವತ್ತು ಬರುತ್ತೀರಿ ಎಂಬುದನ್ನು ನಿಮ್ಮ ಉತ್ತರದಲ್ಲಿ ಹೇಳಿ. ಅಲ್ಲೇನು ಉಪ ನಗರಗಳನ್ನು ನಿರ್ಮಾಣ ಮಾಡುತ್ತೀರೋ? ಕೈಗಾರಿಕಾ ನಗರ ನಿರ್ಮಾಣ ಮಾಡುತ್ತೀರೋ? ಏನು ಮಾಡಬೇಕೆಂದಿದ್ದೀರೋ, ತಾವು ಬನ್ನಿ. ಬಹಳ ಸಂತೋಷವಾಗಿ ನಾವು ಸ್ವಾಗತ ಮಾಡುತ್ತೇವೆ. ಖಾದಿ ಗ್ರಾಮೋದ್ಯೋಗ, ಇದು ನಿಜಕ್ಕೂ ತೀರಾ ಹಿಂದೆ ಬೀಳುತ್ತಿದೆ. ಯಾವ ಉದ್ದೇಶದಿಂದ ಈ ದೇಶಕ್ಕೆ ಸ್ವಾತಂತ್ರ್ಯ ಬಂತು? ಯಾವ ಉದ್ದೇಶದಿಂದ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂತಹ ಪ್ರತಿಯೊಬ್ಬ ಸತ್ಯಾಗ್ರಹಿಯೂ ತನ್ನ ಮೈಮೇಲೆ ಖಾದಿ ಉಡುಪನ್ನೇ ಧರಿಸಬೇಕು ಎಂದು ಹೇಳಿದ. ರಾಟೆಯಲ್ಲಿ ನೇಯ್ದದಂತಹ ದಾರದಿಂದ ತಯಾರು ಮಾಡಿದಂತಹ ವಸ್ತುವೇ ಖಾದಿ ಬಟ್ಟೆ, ಖಾದಿ ಉದ್ಯಮಕ್ಕೆ, ಖಾದಿ

ಕೈಗಾರಿಕೆಗಳಿಗೆ, ಖಾದಿ ವ್ಯವಸ್ಥೆಗೆ ಸಮಗ್ರವಾದಂತಹ ಯೋಜನೆ ಆಗಲಿ. ಇದರಲ್ಲಿ ಹಿಂದೆ ಬೀಳುವುದೇ ಬೇಡ. ಖಾದಿ ಹಾಕುವ ಉದ್ದೇಶವೇನು? ಖಾದಿ ಉತ್ಪನ್ನಗಳ ಬಗ್ಗೆ ಹೊಸ ಯೋಜನೆ ಹಾಕಿಕೊಳ್ಳಬೇಕು. ಹೊಸ ತರಹದ ಬಟ್ಟೆಗಳು ಬರಬೇಕು, ನವೀನ ಬಟ್ಟೆಗಳು ಬರಬೇಕು. ಇತ್ತೀಚೆಗೆ ನಗರದಲ್ಲಿ ನಡೆಯುತ್ತಿರುವ ವಸ್ತು ಪ್ರದರ್ಶನಕ್ಕೆ......

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನೀವೇನೂ ಹೊಸ ಡಿಸೈನ್ ಬಟ್ಟೆ ಹಾಕುವುದೇ ಇಲ್ಲವಲ್ಲಾ.

ಶ್ರೀ ವಾಟಾಳ್ ನಾಗರಾಜ್: ಹಾಗೇನಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ನಿಮ್ಮನ್ನು 30 ವರ್ಷಗಳಿಂದ ನೋಡುತ್ತಿದ್ದೇನೆ. ಅದೇ ಟೋಪಿ, ಅದೇ ಕನ್ನಡಕ, ಅದೇ ರೀತಿಯ ಬಟ್ಟೆ, ತಾವು ಹಾಕಿಕೊಳ್ಳುವುದಾದರೆ ನಾನು ಖಂಡಿತ ಮಾಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ಮೊನ್ನೆ ಕೋಟೆ ಪ್ರೌಢ ಶಾಲೆ ಆವರಣದಲ್ಲಿ ನಡೆಯುತ್ತಿರುವ ನಿಮ್ಮ ಖಾದಿ ವಸ್ತು ಪ್ರದರ್ಶನಕ್ಕೆ ಹೋಗಿ 20 ಸಾವಿರ ರೂಪಾಯಿಗಳ ಮೌಲ್ಯದ ಬಟ್ಟೆಯನ್ನು ತೆಗೆದುಕೊಂಡು ಬಂದೆ. ನಾನು ನೂರಕ್ಕೆ ನೂರು ಭಾಗ ಖಾದಿ, ಕೈಮಗ್ಗ ಮತ್ತು ಖಾದಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗ ನೀವು ಹಾಕಿರುವುದು ಖಾದಿಯೇ?

ಶ್ರೀ ವಾಟಾಳ್ ನಾಗರಾಜ್: ಹೌದು. ಇದೇನು ಬಿಚ್ಚಿ ನಿಮಗೆ ತೋರಿಸಬೇಕೇ?

ಶ್ರೀ ಕೆ.ಶ್ರೀನಿವಾಸ ಗೌಡ: ನಾನು ಹೇಳುವುದು ಏನೆಂದರೆ, ಅವರಿಗೆ ಖಾದಿ ಬಗ್ಗೆ ಬಹಳ ಒಲವು ಇದೆ. ಆದರೆ ಅವರು ಹಾಕಿರುವುದು ಮೈಸೂರು ಸಿಲ್ಕ್. ಅದು ಖಾದಿಯದಲ್ಲ ಎಂದು ನಾನು ತಮಗೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಇದು ಅರಳೆ ಬಟ್ಟೆ ಅದರ ಬಗ್ಗೆ ಮಾನ್ಯ ಶ್ರೀನಿವಾಸಗೌಡರಿಗೆ ಗೊತ್ತಾಗುವುದಿಲ್ಲ. ಅವರು ಇತ್ತೀಚೆಗೆ ಖಾದಿ ಹಾಕಿಕೊಳ್ಳುತ್ತಿದ್ದಾರೆ ಎಂದು ಕಾಣುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ವಾಟಾಳ್‌ರವರೆ, ಈಗ ನಾನು ಹೇಳುವುದು ಏನೆಂದರೆ, ಗಾಂಧೀಜಿ ಹೇಳಿದ್ದು ಈ ಖಾದಿ ಅಲ್ಲ. ಈಗ ನಾವೇನು 10 ರೂಪಾಯಿಗಳ starch ಹಾಕಿ ಈ ಬಟ್ಟೆಯನ್ನು ತೊಡುತ್ತಿದ್ದೇವೋ, ಇದನ್ನಲ್ಲ ಗಾಂಧೀಜಿ ಹೇಳಿದ್ದು. ದುರ್ದೈವದಿಂದ pure ಖಾದಿಯೇ ಈಗ ಸಿಗುತ್ತಿಲ್ಲ. ನಾವೇ ನೂತು, ನಾವೇ ನೇಯ್ದು, ಹಾಕಿಕೊಳ್ಳುವ ಬಟ್ಟೆಯನ್ನೇ ಖಾದಿ ಎಂದು ಗಾಂಧೀಜಿಯವರು ಹೇಳಿದರು. ಆ ಕಾರಣದಿಂದ ಇವತ್ತೇನು ನಾವು ಖಾದಿ ಹಾಕುತ್ತಿದ್ದೇವೋ, ಅದು ನಿಜವಾದ ಖಾದಿ ಅಲ್ಲ. ನಾವೇ ನೂತು ಅದನ್ನು

ಹಾಕಿಕೊಳ್ಳಬೇಕಾಗುತ್ತದೆ. ಆದರೆ ತಮ್ಮ ಬಗ್ಗೆ ಹೇಳುವುದಾದರೆ, ತಮ್ಮ ಟೋಪಿಯೇ ಮೊದಲಿಗೆ ಖಾದಿಯದಲ್ಲ. ಖಾದಿ ಟೋಪಿಯನ್ನೇ ತಾವು ಹಾಕಿಲ್ಲ.

ಶ್ರೀ ವಾಟಾಳ್ ನಾಗರಾಜ್: ಆಯಿತು, ತಾವು ಮಹಾತ್ಮ ಗಾಂಧಿ ಕಡೆಯವರು. ಅದಕ್ಕಾಗಿಯೇ ಪಕ್ಷಾಂತರ ಮಾಡುತ್ತಿದ್ದೀರಿ, ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಇದು ಚೆನ್ನಾಗಿದೆ. ಖಾದಿ ಉತ್ಪನ್ನಗಳ ಬಗ್ಗೆ ತಾವು ಪ್ರಾಮಾಣಿಕವಾಗಿ ಇದನ್ನು ಮಾಡಲೇಬೇಕು. ನನಗೆ ಅದರ ಬಗ್ಗೆ ಬಹಳ ಅಭಿಮಾನ ಇದೆ. ರಾಷ್ಟ್ರಧ್ವಜ ತಯಾರಾಗತಕ್ಕಂಥ ಧಾರವಾಡ ಜಿಲ್ಲೆಯ ಗರಗ ಊರು......

ಅಧ್ಯಕ್ಷರು: ಬೇಗ ಮುಗಿಸಬೇಕು ಎಂದು ನಿಮ್ಮಲ್ಲಿ ನನ್ನ ವಿನಂತಿ.

ಶ್ರೀ ವಾಟಾಳ್ ನಾಗರಾಜ್: ಇನ್ನು ಹತ್ತೇ ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು: ಹತ್ತು ನಿಮಿಷ ಜಾಸ್ತಿಯಾಯಿತು, ಐದು ನಿಮಿಷಗಳಲ್ಲಿ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್: ಆಯಿತು ಸಾರ್, ಇನ್ನು ಎಂಟೇ ನಿಮಿಷಗಳಲ್ಲಿ ಮುಗಿಸುತ್ತೇನೆ. ಗರಗ ಎಂಬುದೇನಿದೆ, ತಾವು ಒಂದು ಸಾರಿ ದಯವಿಟ್ಟು ಅಲ್ಲಿಗೆ ಹೋಗಿ ಬರಬೇಕು, ಧಾರವಾಡ ಜಿಲ್ಲೆಯ ಗರಗದಲ್ಲಿ ನಮ್ಮ ರಾಷ್ಟ್ರಧ್ವಜವನ್ನು ತಯಾರು ಮಾಡುತ್ತಾರೆ. ಮಾನ್ಯ ಸಿಂಧ್ಯಾರವರೆ, ತಾವು ಅಲ್ಲಿಗೆ ಹೋಗಿ ಭೇಟಿ ಮಾಡಬೇಕು. ಆ ಜನಕ್ಕೆ ಅದನ್ನು ತಯಾರು ಮಾಡತಕ್ಕಂಥ ನೇಕಾರರಿಗೆ ಸಂಪೂರ್ಣವಾದಂತಹ ಸವಲತ್ತು ಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ತಾವೂ ಬನ್ನಿ, ಅಲ್ಲಿಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್: ಆಯಿತು, ಜೊತೆಯಲ್ಲೇ ಹೋಗೋಣ. ವರ್ಷಕ್ಕೊಂದು ಸಾರಿ ಅವರನ್ನು ಸನ್ಮಾನ ಮಾಡಬೇಕು. ಇಡೀ ರಾಷ್ಟ್ರಕ್ಕೆ ರಾಷ್ಟ್ರಧ್ವಜ ತಯಾರಿಸಿ ಕೊಡತಕ್ಕಂಥ ಒಂದೇ ಒಂದು ಗ್ರಾಮವೆಂದರೆ, ಅದು ಗರಗ. ಆ ಗರಗಿನ ಜನರಿಗೆ ನೀವು ಸಂಪೂರ್ಣವಾಗಿ ಗೌರವವನ್ನು ಸೂಚಿಸಬೇಕು. ನಾನು ಮಾನ್ಯ ಎಸ್.ಎಸ್.ಪಾಟೀಲರ ಗಮನ ಸೆಳೆಯುತ್ತೇನೆ, ಬಹಳ ಸಂತೋಷ ನೀವು ಹೇಳಿದ್ದು. ಖಾದಿ ಸತ್ಯ, ಅಹಿಂಸೆ ಮತ್ತು ಪ್ರಾಮಾಣಿಕತೆಯ ಸಂಕೇತವಾಗಿದೆ. ಪ್ರಾಮಾಣಿಕರು ಮಾತ್ರ ಖಾದಿ ಬಟ್ಟೆ ಧರಿಸಬೇಕು. ಈಗ ಏನಾಗಿದೆ? ಈಗ ಖಾದಿ ಬಟ್ಟೆ ಧರಿಸುವವರೆಲ್ಲಾ ಪ್ರಾಮಾಣಿಕರೇ? ಖಾದಿ ಬಟ್ಟೆ ಉದ್ದೇಶ, ಅದರ ತತ್ವ......

ಶ್ರೀ ಎಸ್.ಎಸ್.ಪಾಟೀಲ್: ನಿಜವಾಗಿ ಹೇಳುತಕ್ಕಂತಹ ಮಾತು ಒಪ್ಪತಕ್ಕಂಥದ್ದು. ಪ್ರಾಮಾಣಿಕತೆ ಇದ್ದವರು ಖಾದಿ ಧರಿಸಬೇಕೆಂದರೆ ಬಹುತೇಕ

100 ಪರ್ಸೆಂಟ್ ಯಾರೂ ಧರಿಸಬಾರದು. ನಾವು 224 ಜನ ಸದಸ್ಯರೂ ಧರಿಸಬಾರದು. ಏಕೆಂದರೆ ನಾವು ಇಲ್ಲಿ ಬರುವ ಮುಂಚೆ ಸುಳ್ಳು ಲೆಕ್ಕ ಕೊಟ್ಟು ಒಳಗೆ ಬಂದಿದ್ದೇವೆ. ಆ ಎಲೆಕ್ಷನ್ ಕಮಿಷನ್‌ಗೆ ಲೆಕ್ಕ ಕೊಡುವಾಗ ಸುಳ್ಳು ಲೆಕ್ಕ ಕೊಟ್ಟು ಒಳಗೆ ಬಂದಿದ್ದೇವೆ. ಆದರೆ ಇದ್ದುದರಲ್ಲಿ ಪ್ರಾಮಾಣಿಕವಾಗಿ ಇರಲಿಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾರೂ ಪ್ರಾಮಾಣಿಕರು ಇದ್ದಾರೆ ಅವರು ಖಾದಿ ಹಾಕುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಇದೂ ಕೂಡ ಸುಳ್ಳು ನಿಮ್ಮದು.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ರಾಷ್ಟ್ರಧ್ವಜದ ವಿಷಯದಲ್ಲಿ ಮಾತನಾಡುತ್ತಿದ್ದರು. ನಮ್ಮಲ್ಲಿ 224 ಜನ ನಾವೇನು ಇದ್ದೇವೆ. ಆ ಫ್ಲ್ಯಾನನ್ನು ಯಾವಾಗ ಉಪಯೋಗಿಸಬೇಕು. ಯಾವಾಗ ಉಪಯೋಗಿಸಬಾರದು ಎನ್ನುವ ಕಾನೂನನ್ನು ಇದುವರೆಗೆ ನಮಗೆ ಹೇಳಲಿಲ್ಲ. ಇದು ಪ್ರತಿಯೊಬ್ಬರಿಗೂ ಗೊತ್ತಾಗಬೇಕು. ಬಸ್ಸಿನಲ್ಲಿ ಕಾರಿನಲ್ಲಿ ಯಾವಾಗ ಅದನ್ನು ಉಪಯೋಗಿಸಬೇಕೆಂಬುದು ಗೊತ್ತಿಲ್ಲ. ನಮ್ಮ 224 ಜನ ಶಾಸಕರಿಗೆ ಫ್ಲಾನ್ ಕೊಡುವಂತದು ಅಂತ ಏನು ಇದೆ ಅದನ್ನು ಇಶ್ಯೂ ಮಾಡಬೇಕೆಂದು ತಮ್ಮ ಮೂಲಕ ನಾನು ಹೇಳುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಅದನ್ನು ಜನಪ್ರತಿನಿಧಿಗಳು ಆದಮೇಲೆ ತಿಳಿದುಕೊಳ್ಳಬೇಕು. ನಮ್ಮಲ್ಲಿ ಒಬ್ಬರು ಸ್ವಾತಂತ್ರ್ಯ ಹೋರಾಟಗಾರರು ಇದ್ದಾರೆ. ನಾವು ಒಂದು ದಿವಸ ಒಂದು ಲಾಂಡ್ರಿ ಇನಾಗ್ಯುರೇಷನ್‌ಗೆ ನಾನು ಶಾಸಕನಾಗುವುದಕ್ಕೆ ಮುಂಚೆ ಅವರ ಜೊತೆ ಹೋದೆ. ಅವರು ಹೇಳಿದ್ದು ಬೇರೆ ಎಲ್ಲಾ ಬಟ್ಟೆ ವಾಶ್ ಮಾಡುತ್ತೀರಿ. ನಮ್ಮ ಬಟ್ಟೆ ಕೊಳೆ ತೆಗೆಯುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಅಂಗಡಿಯವರು ಇಲ್ಲ ನಾವು ಅದನ್ನು ವಾಶ್ ಮಾಡುತ್ತೇವೆಂದು ಹೇಳಿದರು. ನೀವು ಅದನ್ನು ವಾಶ್ ಮಾಡುತ್ತೀರಿ. ಅದರಲ್ಲಿ ಸೇರಿಕೊಂಡಿರುವ ಕೊಳೆ ತೆಗೆಯುವುದಕ್ಕೆ ಆಗುವುದಿಲ್ಲವೆಂದು ಅವರು ಹೇಳಿದರು. ಅಷ್ಟು ಕೊಳೆ ಸೇರಿಕೊಂಡಿದೆ ಎಂದು ಅವರು ಹೇಳಿದ್ದು ನಾನು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಶ್ರೀನಿವಾಸಗೌಡರು ಹೇಳಿದ್ದಕ್ಕೆ ಉತ್ತರ ಕೊಡುತ್ತೇನೆ. ಶಾಸಕರು ಕಾರಿನಲ್ಲಿ ರಾಷ್ಟ್ರಧ್ವಜ ಹಾಕುವುದಿಲ್ಲ ಮಂತ್ರಿಗಳು ಮತ್ತು ಮಂತ್ರಿಗಳಿಗೆ ಸಂಬಂಧಪಟ್ಟವರು ಮತ್ತು ಮಂಡಳಿಗಳ ಅಧ್ಯಕ್ಷರು ಹಾಕುವುದು ಎಂದು ಕಾಣುತ್ತದೆ. ಐಎಎಸ್ ಅಧಿಕಾರಿಗಳು ರಾಷ್ಟ್ರಧ್ವಜ ಹಾಕುತ್ತಾರೆ.

ಶ್ರೀ ಎಸ್.ಎಸ್.ಪಾಟೀಲ್: ಮಂತ್ರಿಗಳು ಮಾತ್ರ ಹಾಕುತ್ತಾರೆ. ಬೇರೆ ಯಾರಿಗೂ ಅಧಿಕಾರ ಇಲ್ಲ. ಬೆಂಗಳೂರಿನಲ್ಲಿ ಮಂತ್ರಿಗಳೂ ಹಾಕುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಾನು ನೀವು ಹೇಳಿದ್ದು ಒಪ್ಪುತ್ತೇನೆ. ರಾಷ್ಟ್ರಧ್ವಜ ಹಾಕಿದ ವಾಹನಗಳು ಎಲ್ಲೆಲ್ಲೋ ನಿಲ್ಲುತ್ತವೆ. ಎಲ್ಲೆಲ್ಲೋ ಹೋಗುತ್ತವೆ. ಗಲ್ಲಿಗಳಿಗೆ ಹೋಗುತ್ತವೆ. ಬಾರ್ ಹತ್ತಿರ ಹೋಗುತ್ತವೆ. ಅವೆಲ್ಲಾ ಅಲ್ಲಿ ಹೋಗಬಾರದು. ಇದು ರಾಷ್ಟ್ರಧ್ವಜಕ್ಕೆ ಆಗುವ ಅಪಮಾನ.

ಶ್ರೀ ಆರ್.ಶ್ರೀನಿವಾಸ್: ಎಲ್ಲೆಲ್ಲಿ ಹೋಗುತ್ತವೆ. ಎಲ್ಲೆಲ್ಲಿ ನೋಡಿದ್ದೀರಿ ಎನ್ನುವುದರ ಬಗ್ಗೆ ತಾವು ಸಂಕ್ಷಿಪ್ತವಾಗಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್: ಎಲ್ಲೆಲ್ಲಿ ಹೋಗುತ್ತವೆ ಎಂದು ಹೇಳಿದರೆ ಬಹಳ ಜನ ಸಿಕ್ಕಿ ಕೊಳ್ಳುತ್ತಾರೆ. ನನ್ನ ಹತ್ತಿರ ಪಟ್ಟಿ ಇದೆ. ಹೇಳಿ ಎಂದರೆ ಹೇಳುತ್ತೇನೆ. ಇದೆಲ್ಲಾ ಸರಿ ಇಲ್ಲ. ನಮ್ಮ ಸ್ನೇಹಿತರನ್ನು ಏಕೆ ನಾವು ಇಕ್ಕಟ್ಟಿಗೆ ಸಿಕ್ಕಿಸಬೇಕು?

ಶ್ರೀ ಎಸ್.ಎಸ್.ಪಾಟೀಲ್: ಇದಕ್ಕೆ ಉತ್ತರವನ್ನು ನಿಮಗೆ ಜೆ.ಹೆಚ್.ಪಟೇಲ್ ಸಾಹೇಬರು ಅವತ್ತೇ ಹೇಳಿದ್ದಾರೆ. ನೀವು ಇದನ್ನು ಹೇಳಿದಾಗ ಜೆ.ಹೆಚ್.ಪಟೇಲ್ ಸಾಹೇಬರು ಉತ್ತರ ಹೇಳುವಾಗ ಯಾರ್ಯಾರು ಅಂತ ಕೇಳಿ ಹೇಳುತ್ತೇವೆಂದು ಹೇಳಿದ್ದರು.

ಶ್ರೀ ವಾಟಾಳ್ ನಾಗರಾಜ್: ಶ್ರೀಮಾನ್ ಜೆ.ಹೆಚ್.ಪಟೇಲರದು ಎರಡನೇ ಕನಸಿನ ವಿಚಾರ ಇದೆ. ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏನೇನು ಹೇಳಿದ್ದಾರೆಂದು ಇನ್ನೊಂದು ದಿವಸ ಹೇಳುತ್ತೇನೆ. ಇಲ್ಲಿ ಇರುವವರ ಬಗ್ಗೆ ಹೇಳಿದ್ದಾರೆ ಅದನ್ನು ನಂತರ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಪ್ರಾಮಾಣಿಕರು, ಪ್ರಾಮಾಣಿಕತೆ ಬಗ್ಗೆ ಹೇಳಬೇಕೆಂದರೆ, ಮಹಾತ್ಮ ಗಾಂಧೀಜಿಯವರು ಅವತ್ತು ಖಾದಿ ಆರಂಭ ಮಾಡಿದ ಆ ಉದ್ದೇಶ ಏನು ಪ್ರಾಮಾಣಿಕತೆಯ, ಸತ್ಯಕ್ಕೆ ಧರ್ಮಕ್ಕೆ ಇದು ಇರಬೇಕು. ಮಾನ್ಯ ಎಸ್.ಎಸ್.ಪಾಟೀಲರು ಹೇಳಿದರು. ಅದನ್ನೇ ನಾವು ಆ ಸೂತ್ರವನ್ನು ಅನುಸರಿಸಿದರೆ ಯಾರೂ ಅದಕ್ಕೆ ಬದ್ಧರಿಲ್ಲ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಖಾದಿ ಬಟ್ಟೆ ಹಾಕಿಕೊಂಡು ಮಧ್ಯಪಾನ ಮಾಡಬಾರದು. ಈ ಜುಬ್ಬಾ ಹಾಕಿಕೊಂಡು ಬಾಟಲ್ ಹಿಡಿದು ತಕ್ಷಣ ಜುಬ್ಬಾ ಮೊದಲು ಮಧ್ಯ ತುಂಬಿದ ಗ್ಲಾಸ್‌ನಲ್ಲಿ ಬೀಳುತ್ತದೆ. ನಾಲ್ಕು ಸಾರಿ ಕುಡಿದ ನಂತರ ಮೈ ಮರೆತ ಮೇಲೆ ಜುಬ್ಬಾ ಆ ಬಾಟಲಿಗೆ ಬೀಳುತ್ತದೆ. ಕೈ ಎಲ್ಲಾ ತೇವ ಆಗುತ್ತದೆ. ಮಧ್ಯಪಾನದಲ್ಲಿ ಖಾದಿ ಬಟ್ಟೆ ತೇವ ಆಗಿ ಗೊತ್ತಿಲ್ಲದೆ ಇರತಕ್ಕಂತಹ ಪರಿಸ್ಥಿತಿ ಇವತ್ತು ಬಂದಿದೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಎಸ್.ಎಸ್.ಪಾಟೀಲರಿಗೆ ನೋಡಿಕೊಂಡು ಹೇಳುತ್ತಿದ್ದೀರಿ. ಅವರು ಯಾವತ್ತಾದರೂ ತೇವ ಮಾಡಿಕೊಂಡಿದ್ದಾರಾ?

ಶ್ರೀ ವಾಟಾಳ್ ನಾಗರಾಜ್: ಅವರು ಒಬ್ಬರು ಮಹಾ ಶರಣರು. ನಾನು ಅವರನ್ನು ಇದಕ್ಕೆ ಹೋಲಿಸುವುದಕ್ಕೆ ತಯಾರಾಗಿಲ್ಲ. ಖಾದಿ ಹಾಕಿಕೊಂಡು ಕುಡಿಯಬೇಕೇ ಮಧ್ಯಪಾನ ಮಾಡಬೇಕೇ. ಬೇಡವೆ ಎನ್ನತಕ್ಕಂತಹ ಪರಿವೇ ನಮಗೆ ಇರುವುದಿಲ್ಲ. ಎಲ್ಲೋ ಒಂದು ಕಡೆ ಖಾದಿ ಬಟ್ಟೆ ಅವರು ಹೇಳಿದ ಹಾಗೆ ಗಂಜಿ ಹಾಕಿಕೊಂಡಿರುವುದು ಹೋಗಿ ಕೂತ ತಕ್ಷಣ ಒಂದೆರಡು ಪೆಗ್ ತೆಗೆದುಕೊಂಡು ತಕ್ಷಣ 3ನೇ ಪೆಗ್‌ಗೆ ಜುಬ್ಬಾ ಗ್ಲಾಸ್ ಒಳಗೆ ಬೀಳುತ್ತದೆ. ಆ ಖಾದಿ ಬಟ್ಟೆಗೆ ಮಧ್ಯಪಾನ ಮಾಡಿಸುತ್ತಾರೆ. ಅವರು ಕುಡಿದದ್ದು ಅಲ್ಲದೆ ಬಟ್ಟೆಗೆ ಮಧ್ಯಪಾನ ಮಾಡಿಸುತ್ತಾರೆ.

ಶ್ರೀ ಗೋವಿಂದ ಎಂ.ಕಾರಜೋಳ: ನಿಮಗೆ ಹೇಗೆ ಅದರ ಅನುಭವ?

ಶ್ರೀ ವಾಟಾಳ್ ನಾಗರಾಜ್: ನಿಮ್ಮಂತಹವರ ಜೊತೆ ಸೇರಿ ಕೂತು ನಿಮ್ಮ ಅನುಭವವನ್ನು ಕಾಣ್ಣಾರೆ ನೋಡಿರುವುದರಿಂದ ಈ ಪರಿಸ್ಥಿತಿ ಬಂದಿದೆ. ಪ್ರಾಣಿ ಹಿಂಸೆ ಮಾಡಬಾರದು. ಇದಕ್ಕೆ ವಿರೋಧ ಇದೆ.

ಶ್ರೀ ಕೆ.ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಪೆಗ್ ಹಾಕುವವರು ನಮ್ಮ ಹಿರಿಯ ನಾಯಕರು ಹೇಳುತ್ತಿದ್ದರು. ಒಂದು ಪೆಗ್ ಎರಡು ಲೇಗ್ ಇದು ಇದ್ದು ಬಿಟ್ಟರೆ ಸಾಕು ಜೀವನದಲ್ಲಿ ಎನ್ನುವ ತರಹ, ಅದೆಲ್ಲಾ ಕೆಲವರಿಗೆ ಅನುಭವ ಇರುವಂತಹ ನಿಮ್ಮ ಸ್ನೇಹಿತರು, ಅವರ ಹತ್ತಿರ ಹೋಗಿ ಚರ್ಚೆ ಮಾಡಿ, ನಿಮಗೆ ಅನುಭವವಾದರೂ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್: ನನ್ನ ಬಹುತೇಕ ಗೆಳೆಯರು ಅವರೇ ಇರುವುದು. ಅದರಲ್ಲಿ ಏನೂ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಆದರೆ ಅದರಲ್ಲಿ ಏನೂ ಮುಚ್ಚುಮರೆ ಇಲ್ಲ. ಆದರೆ ನಾವಿಲ್ಲಿ ಇಂದು ಸ್ಪಷ್ಟ, ಪ್ರಾಮಾಣಿಕತೆ, ಸತ್ಯ, ಮತ್ತು ಧರ್ಮ ಇದು ಖಾದಿಯನ್ನು ಹಾಕತಕ್ಕಂತಹವರಾಗಿ ಇರಬೇಕು. ಭ್ರಷ್ಟಾಚಾರಕ್ಕೆ ಇಳಿಯಬಾರದು. ತತ್ವ ನೀತಿ ಎಲ್ಲದಕ್ಕೂ ತಿಲಾಂಜಲಿ ಆಗಿ ಹೋಗಿದೆ. ಆದರೂ ಚಿಂತೆ ಇಲ್ಲ. ಖಾದಿ ಉದ್ಯಮಕ್ಕೆ ಹೆಚ್ಚಿನ ಬೆಂಬಲವನ್ನು ಕೊಡಬೇಕಾಗಿತ್ತು. ಮಾನ್ಯ ಸಿಂಧ್ಯಾರವರಿಗೆ ಕಳಕಳಿಯಿಂದ ಮನವಿ ಮಾಡುತ್ತೇನೆ. ಮಹಾತ್ಮಗಾಂಧಿಯವರು ಯಾವ ಉದ್ದೇಶದಲ್ಲಿ ಖಾದಿಯನ್ನು ಹಾಕಿದರು ಆ ಉದ್ದೇಶ ಈಡೇರಿಲ್ಲ ಎಂದು ಹೇಳುವುದನ್ನು ತಾವು ಒಪ್ಪಿದಿರಿ. ಖಾದಿಗೆ ಏನು ಹೇಳುತ್ತೀರಿ?

ಶ್ರೀ ಎಸ್.ಎಸ್.ಪಾಟೀಲ್: ತಾವು ದಯವಿಟ್ಟು ಕೇಳಬೇಕು. ನಿಜವಾಗಿ ಈ ದೇಶ ಈ ದುಸ್ಥಿತಿಗೆ ಬರುವುದಕ್ಕೆ ಮೂರು ಕಾರಣ ಖಾವಿ, ಖಾದಿ ಮತ್ತು ಖಾಕಿ. ಈ ಮೂರು ಜನ ನಾವು ಯಾರ್‍ಯಾರು ಏನೇನು ಪ್ರಾಮಾಣಿಕವಾಗಿ ಮಾಡಬೇಕಾಗಿತ್ತು ಅದು ಮಾಡಿದ್ದರೆ ಈ ದೇಶ ಈ ದುಸ್ಥಿತಿಗೆ ಬರುತ್ತಿರಲಿಲ್ಲ. ಈ ಮೂರು ಕಡೆ ತಪ್ಪು ಇರುವುದರಿಂದ ಇಷ್ಟೆಲ್ಲಾ ಈ ದೇಶ ದುಸ್ಥಿತಿಗೆ ಬಂದಿದೆ. ಖಾದಿ ಹಾಕಿದವರು ಖಾವಿ ಹಾಕಿದವರು ಮತ್ತು ಖಾಕಿ ಹಾಕಿದವರು ಈ ಮೂರು ಜನರ ಕಚ್ಚೆ ಕೈ ಬಾಯಿ ಮೂರು ಶುದ್ಧ ಇರಬೇಕಾಗುತ್ತದೆ. ಅದು ಇಲ್ಲ. ಆ ಮೂರು ಶುದ್ಧ ಇದ್ದರೆ ಸಾಕು ನೀವು ಮಾತನಾಡುವುದು ಯಾವುದು ಬೇಕಾಗಿಲ್ಲ. ಎಲ್ಲವೂ ಅದರಲ್ಲಿ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಅದನ್ನೇ ನಾನು ಹೇಳುತ್ತಿದ್ದೇನೆ. ಆ ತರಹದ ಉಡುಪುಗಳು ಖಾದಿ, ಖಾವಿ, ಖಾಕಿ ಬಿಡಿ ನೆಗೆದು ಬಿದ್ದು ಹೋಯಿತು. ಅದರ ಬಗ್ಗೆ ನಾವೇನೂ ಮಾತನಾಡುವ ಹಾಗಿಲ್ಲ. ಖಾಕಿ ಕಥೆ ಮುಗಿದೇ ಹೋಯಿತು. ಖಾಕಿ ಸಂಪೂರ್ಣ ಭ್ರಷ್ಟಾಚಾರದ ಭೂತದಲ್ಲಿ ಸಿಕ್ಕಿ ನರಳಿ ನರಳಿ ಸಾಯುತ್ತಿದೆ. ಖಾವಿ-ಧರ್ಮ ಪ್ರಚಾರ, ಸತ್ಯ ಪ್ರಚಾರ, ಪ್ರಾಮಾಣಿಕತೆ, ವೇದಾಂತಗಳು, ಆಶೀರ್ವಾದ ಅವರ ಪರಿಸ್ಥಿತಿ ಏನು ಅದರ ಬಗ್ಗೆ ಏನು? ಇವತ್ತಿನ ಪರಿಸ್ಥಿತಿಯಲ್ಲಿ 8ನೇ ಶತಮಾನದಲ್ಲಿ 12ನೇ ಶತಮಾನ ಅಲ್ಲಿ ಬಂದಂತಹ ಪೂಜ್ಯರು, ಪರಮ ಪೂಜ್ಯರು, ಶರಣರುಗಳು, ಅವರು ಹಾಕುತ್ತಿದ್ದಂತಹ ಖಾದಿ, ಇವತ್ತಿನ ಖಾದಿ ಹೋಲಿಕೆ ಇದು ಎಷ್ಟರ ಮಟ್ಟಿಗೆ ನಿಜ. ಇದರ ಬಗ್ಗೆ ನಾವು ಪ್ರಾಮಾಣಿಕವಾಗಿ ಚರ್ಚೆ ಮಾಡಬೇಕಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ನಾನು ಇದನ್ನು ಬಹಳ ಅತ್ಯಂತ ಜಾಗರೂಕತೆಯಿಂದ ಮಾನ್ಯ ಸಿಂಧ್ಯಾರವರಿಗೆ ಹೇಳುತ್ತೇನೆ. ಖಾದಿಯನ್ನು ಬೆಳೆಸುವ ಬಗ್ಗೆ, ಖಾದಿ ಮಂಡಳಿಗಳನ್ನು ಬೆಳೆಸುವ ಬಗ್ಗೆ ಖಾದಿ ಕ್ಷೇತ್ರವನ್ನು ಬೆಳೆಸುವ ಬಗ್ಗೆ ಅಪಾರವಾದ ಗಮನಕೊಡಬೇಕು.

ಶ್ರೀ ಹೆಚ್.ಡಿ.ಬಸವರಾಜ್: ತಾವು ಉಲ್ಲೇಖ ಮಾಡುವ ಸಂದರ್ಭದಲ್ಲಿ ಖಾಕಿ ಹೇಳಿದಿರಿ. ಖಾಕಿ ಭ್ರಷ್ಟಾಚಾರದ ಪ್ರತೀಕಾನಾ?

ಶ್ರೀ ವಾಟಾಳ್ ನಾಗರಾಜ್: ಖಾಕಿ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಖಾಕಿ ಕಥೆ ಮುಗಿದು ಹೋಗಿದೆ. ಇದರ ಬಗ್ಗೆ ನಾವು ಏನೂ ಹೇಳಬೇಕಾಗಿಲ್ಲ. ಈಗ ಅದಕ್ಕೆ ತದ್ವಿರುದ್ಧವಾಗಿ ಯಾವ ಉದ್ದೇಶಕ್ಕೆ ನಾವು ಖಾದಿಯನ್ನು ಬಳಸುತ್ತಿದ್ದೇವೆ. ಅದು ತದ್ವಿರುದ್ಧವಾಗಿದೆ. ಯಾವ ಉದ್ದೇಶಕ್ಕೆ ಖಾವಿಯನ್ನು ಹಾಕುತ್ತಿದ್ದಾರೆ. ಅವರು ತದ್ವಿರುದ್ಧವಾಗಿದ್ದಾರೆ. ಖಾದಿ, ಖಾಕಿ ಮತ್ತು ಖಾವಿ ಈ ಮೂರು ಎಷ್ಟು ಪರಮ ಪವಿತ್ರವಾದಂಥ ಹೆಸರುಗಳು ಈ ಪಾವಿತ್ರ್ಯತೆಗೆ

ಸಂಪೂರ್ಣವಾಗಿ ಭಂಗ ಒದಗಿದೆ. ಇನ್ನು 25 ಲಕ್ಷ ಜನ ರೇಷ್ಮೆ ಉದ್ಯಮದಲ್ಲಿ ಕರ್ನಾಟಕದಲ್ಲಿ ಬಹತೇಕ ಬದುಕುತ್ತಿದ್ದಾರೆ. ನನಗನ್ನಿಸುತ್ತದೆ. ಬಹುಶಃ ಚೀನಾ ಬಿಟ್ಟರೆ ಇಡೀ ವಿಶ್ವದಲ್ಲಿ ಭಾರತದಲ್ಲಿ ಕರ್ನಾಟಕ ಬಹಳ ಮುಂದೆ ಇದೆ. ತುಮಕೂರು, ಮೈಸೂರು, ಚಾಮರಾಜನಗರ, ಕನಕಪುರ ಮತ್ತು ಕೋಲಾರ ಈ ಜಿಲ್ಲೆಗಳಲ್ಲಿ ಒಂದು ಹೊಸ ಅಧ್ಯಾಯ ಇದೆ. ರೇಷ್ಮೆ ಬೆಳೆ, ರೇಷ್ಮೆ ರೈತ ಅಂದರೆ, ಅದಕ್ಕೆ ಒಂದು ಶಕ್ತಿ, ಅಭಿಮಾನ ಎಲ್ಲಾ ಇತ್ತು. ಇವತ್ತು ಆ ರೇಷ್ಮೆ ಬೆಳೆ ವಿಶ್ವ ಬ್ಯಾಂಕಿನ ನೆರವು ತೆಗೆದುಕೊಂಡು ಅನೇಕ ವಿಚಾರಗಳು ಇದ್ದರೂ ಸಂಪೂರ್ಣವಾಗಿ ನರಳುತ್ತಿದೆ. ಆಧುನಿಕವಾದಂಥ ವ್ಯವಸ್ಥೆಯಾಗಬೇಕು. ಆಧುನಿಕವಾದಂಥ ಬಿಳಿ ತಳಿಗಳು ಬರಬೇಕು. ಹುಳುಗಳನ್ನು ಬೆಳೆಸತಕ್ಕಂಥದ್ದರಲ್ಲಿ ಮೊದಲು ಆರೋಗ್ಯಕರವಾದಂಥ ಹುಳುಗಳು, ಆರೋಗ್ಯಕರವಾದಂಥ ಮೊಟ್ಟೆ ಆರೋಗ್ಯಕರವಾದ ಗ್ರೈನೇಜ್‌ಗಳು, ಇವೆಲ್ಲವೂ ಹೊಸ ರೀತಿಯಲ್ಲಿ ತಯಾರಾಗಬೇಕಾಗಿದೆ. ರೇಷ್ಮೆ ಇಲಾಖೆ ಮಾನ್ಯ ಸಿಂಧ್ಯಾರವರೇ ಮುಚ್ಚಿಹೋಗಿದೆ. ಇದರ ಬಗ್ಗೆ ಪ್ರಾಮಾಣಿಕವಾಗಿ ನೀವು ರೇಷ್ಮೆ ಇಲಾಖೆಯನ್ನು ಉಳಿಸಬೇಕು, ರೇಷ್ಮೆ ರೈತ ಉಳಿಯಬೇಕು. ನೇಕಾರ ಉಳಿಯಬೇಕು. ಮತ್ತು ವ್ಯಾಪಾರಸ್ಥ ಉಳಿಯಬೇಕು. ಮೂರು ಜನ ನೇಕಾರ ರೈತ ಮತ್ತು ವ್ಯಾಪಾರಸ್ಥ ಅಂದರೆ ಬಟ್ಟೆಯನ್ನು ಮಾರತಕ್ಕಂಥ ವ್ಯಾಪಾರಸ್ಥ, ಈ ಮೂರು ಜನರನ್ನು ಉಳಿಸುವುದಕ್ಕೆ ರೇಷ್ಮೆ ಇಲಾಖೆಯನ್ನು ಸಮಗ್ರವಾಗಿ ಆಧುನೀಕರಣಗೊಳಿಸಿ ರೇಷ್ಮೆ ರೈತರಿಗೆ ಹೊಸ ಶಕ್ತಿ ಬರುವ ರೀತಿಯಲ್ಲಿ ಆಶಾಕಿರಣವಾಗಿ ಹೊಸ ರೀತಿಯನ್ನು ಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇನ್ನು ಕೈಮಗ್ಗದ ಬಗ್ಗೆ ಹೇಳಬೇಕೆಂದರೆ, ಕೈಮಗ್ಗದ ಸಮಗ್ರ ಅಭಿವೃದ್ಧಿ ಬಗ್ಗೆ ಕೈಮಗ್ಗದ ಸಮಗ್ರ ಬೆಳವಣಿಗೆಯ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ನೀವು ಮಾಡಬೇಕಾಗಿದೆ. ಅದು ಬಹಳ ಅತ್ಯಂತ ಅವಶ್ಯಕತೆ ಇದೆ. ಅತ್ಯಂತ ಪ್ರಾಮಾಣಿಕತೆ ಇದೆ. ಆದುದರಿಂದ ಈ ಬಗ್ಗೆ ನಾನು ತಮ್ಮ ಮೂಲಕ ಮನವಿಯನ್ನು ಮಾಡುತ್ತಿದ್ದೇನೆ. ಈಗ ಸಕ್ಕರೆ ಕಾರ್ಖಾನೆಗಳನ್ನು ತಾವು ನೋಡಿದ್ದೀರಿ. ಅನೇಕ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ. ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿ ಇಲ್ಲದೇ ಲಾಭದಲ್ಲಿ ಬರಬೇಕಾದಲಿ ಬರೀ ಸಕ್ಕರೆ ಒಂದೇ ಅಲ್ಲ ಬೇರೆ ಏನು ವ್ಯವಸ್ಥೆ ಮಾಡಬೇಕೆನ್ನುವುದರ ಬಗ್ಗೆ ತಾವು ಮತ್ತು ಸಹಕಾರ ಸಚಿವರು ಈ ಬಗ್ಗೆ ಚಿಂತನೆಯನ್ನು ಮಾಡಿ ಸಕ್ಕರೆ ಕಾರ್ಖಾನೆಗಳು ಕರ್ನಾಟಕದಲ್ಲಿ ಉಳಿಯುವುದಕ್ಕೆ ಎಷ್ಟು ಶಕ್ತಿ ಕೊಡಬೇಕು ಎನ್ನತಕ್ಕಂಥದ್ದನ್ನು ತಾವು ಪ್ರಾಮಾಣಿಕವಾಗಿ ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿ ಕೊಳ್ಳುತ್ತೇನೆ. ಇನ್ನು ಗಣಿಗಳು, ಎಷ್ಟು ರೀತಿಯ ಖನಿಜಗಳು, ಕಲ್ಲುಗಣಿ

ಮತ್ತು ಬೇರೆ ಬೇರೆ ಖನಿಜಗಳು, ಇವೆಲ್ಲಾ ಖನಿಜಗಳು ನಾನು ಹೇಳುತ್ತೇನೆ. ಅಧ್ಯಕ್ಷರೆ ಕಲ್ಲುಗಣಿ ಮತ್ತು ಕಬ್ಬಿಣ ಇವೊತ್ತು ರಾಜ್ಯಧನದ ಬಗ್ಗೆ ನಾನು ಒಂದು ಸವಾಲು ಹಾಕುತ್ತೇನೆ ತಮಗೆ, ಮಾನ್ಯ ಸಿಂಧ್ಯಾರವರೇ ನಿಮ್ಮ ರಾಜಧನ ಎಷ್ಟು ಬರುತ್ತದೆ. ಕಲ್ಲು ಗಣಿಯಿಂದ ಬೇರೆ ಬೇರೆ ಖನಿಜಗಳಿಂದ ಎಷ್ಟು ನಿಮ್ಮ ಖನಿಜ ಇಲಾಖೆಗೆ ರಾಜಧನ ಬರುತ್ತದೆಯೋ ಅದರ ಮೂರರಷ್ಟು ರಾಜಧನವನ್ನು ನಾನು ಕೊಡುತ್ತೇನೆ. ಇಡೀ ಖನಿಜಗಳನ್ನು ನಮಗೆ ನೀವು ವಹಿಸುತ್ತೀರಾ? ಖನಿಜಗಳಲ್ಲಿ ದೊಡ್ಡ ದರೋಡೆ, ಲೂಟಿ, ನಿಸರ್ಗ ನಾಶ, ಇಡೀ ರಾಜ್ಯದ ಸಮಗ್ರ ಸಂಪತ್ತು ಸಂಪೂರ್ಣ ನಾಶವಾಗಿದೆ. ಈ ನಾಶದ ಬಗ್ಗೆ ಹೇಳುತ್ತಾ ಹೋದರೆ, ಅರಣ್ಯ ನಾಶ, ದೇವಸ್ಥಾನಗಳ ನಾಶ, ಸಾರ್ವಜನಿಕ ಸ್ಥಳಗಳ ನಾಶ, ನಿಸರ್ಗ ನಾಶ ಹೀಗೆ ಎಲ್ಲಾ ರೀತಿಯಲ್ಲಿ ನಾಶವಾಗಿ ಕರ್ನಾಟಕವೇ ನಾಶದ ಅಂಚಿನಲ್ಲಿ ತಲುಪುತ್ತಿದೆ. ಅದಕ್ಕೆ ನಾನು ಹೇಳುತ್ತಿದ್ದೇನೆ. ರಾಜಧನ ವರ್ಷಕ್ಕೆ ಇಷ್ಟೆಂದು ನಾವು ಸಂಪಾದನೆ ಮಾಡುತ್ತಿದ್ದೇವೆ ಎಂದು ಹೇಳತಕ್ಕಂಥ ಮಾತೇನಿದೆ. ಅದಕ್ಕೆ ನಾನು ನೇರವಾಗಿ ನಿಮಗೆ ಹೇಳುತ್ತೇನೆ. ಒಂದು ಪಟ್ಟಲ್ಲ, ಎರಡು ಪಟ್ಟಲ್ಲ, ಮೂರು ಪಟ್ಟು ರಾಜಧನವನ್ನು ನಾನು ನಿಮಗೆ ಕೊಡುತ್ತೇನೆ. ಇಡೀ ಸಮಗ್ರ ಖನಿಜವನ್ನು ನನಗೆ ನೀವು ವಹಿಸಿ. ಇದು ನಾನು ನಿಮಗೆ ಹಾಕುವ ಸವಾಲು. ಈ ಸದನದಲ್ಲಿ ನಾನು ಸವಾಲು ಹಾಕುತ್ತೇನೆ. ಒಂದು ಕಡೆ ಈ ಅಧಿಕಾರಿಗಳನ್ನು ಇಟ್ಟುಕೊಂಡು ವ್ಯವಸ್ಥೆ ಇಟ್ಟುಕೊಂಡು ನೀವು ಮಾಡತಕ್ಕಂಥದ್ದನ್ನು ನೋಡಿದಾಗ........

ಶ್ರೀ ಬಿ.ಸಿ.ಪಾಟೀಲ್: ಮಾನ್ಯ ವಾಟಾಳ್‌ರವರೆ, ಈಗ ಮೂರು ಪಟ್ಟು ರಾಜಧನ ಕೊಡುವ ಹೊಣೆ ನೀವು ವಹಿಸಿಕೊಳ್ಳುತ್ತೇನೆ ಎಂದಿರಿ. ಮತ್ತೆ ನೀವೂ ಅದೇ ಕೆಲಸ ಮಾಡಬೇಕಾಗುತ್ತದ್ದಲ್ಲಾ.

ಶ್ರೀ ವಾಟಾಳ್ ನಾಗರಾಜ್: ನಾನು ಯಾವ ಕೆಲಸ ಮಾಡುತ್ತೇನೆ ಎಂಬುದನ್ನು ಮಾನ್ಯ ಪಾಟೀಲರೇ ಆಮೇಲೆ ನೋಡೋಣ.

ಶ್ರೀ ಬಿ.ಸಿ.ಪಾಟೀಲ್: ಪರಿಸರ ಉಳಿಸುವ ಬಗ್ಗೆ ಮಾತನಾಡುವುದು ಬೇರೆ ವಿಷಯ. ನಾವು ತೆಗೆದುಕೊಂಡು ನಂತರ ನಾವೂ ಅದೇ ರೀತಿ ಉದ್ಯೋಗ ಮಾಡಬೇಕಾಗುತ್ತದ್ದಲ್ಲವೇ?

ಶ್ರೀ ಪಿ.ಜಿ.ಸಿಂಧ್ಯಾ (ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಕೈಗಾರಿಕಾ ಇಲಾಖೆಯ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಕೆಲವು ವಿಚಾರಗಳನ್ನು ಕೂಡ ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ರೇಷ್ಮೆ ಮತ್ತು ಗಣಿ ಕೈಗಾರಿಕೆ ನನಗೆ ಬರುವುದಿಲ್ಲ ಎನ್ನತಕ್ಕಂಥದ್ದನ್ನು ಅವರಿಗೆ

ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ರೇಷ್ಮೆ ಇಲಾಖೆಗೆ ಒಬ್ಬ ಮಂತ್ರಿಗಳು ಇದ್ದಾರೆ. ಗಣಿ ಇಲಾಖೆಯನ್ನು ಮುಖ್ಯಮಂತ್ರಿಗಳೇ ಇಟ್ಟು ಕೊಂಡಿದ್ದಾರೆ. ಆದುದರಿಂದ ನೀವು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನನ್ನದೇನೂ ತಕರಾರಿಲ್ಲ.

ಶ್ರೀ ವಾಟಾಳ್ ನಾಗರಾಜು: ನಿರ್ವಹಣಾ ಮುಂಗಡ ಪತ್ರದಲ್ಲಿ ನಿಮಗೆ ಇದು ಬರುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಹೇಳುವುದನ್ನು ಸ್ವಲ್ಪ ಕೇಳಿ. ತಾವು ದಯವಿಟ್ಟು ಕೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜು: ನಾನು ಕೇಳುತ್ತಿದ್ದೇನೆ ಹೇಳಿ. ನನಗೆ ಗೊತ್ತಿರುವುದನ್ನೇ ಕೇಳಿದ್ದು. ಏನು ನೀವು ನನ್ನನ್ನು ಅಷ್ಟು ದಡ್ಡನನ್ನಾಗಿ ಮಾಡಿಬಿಟ್ರೆ! ಚೆನ್ನಾಗಿದೆ, ಚೆನ್ನಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾತನಾಡಿ ಸ್ವಾಮಿ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜು: ಆಯ್ತು ಬಿಡಿ.

ಅಧ್ಯಕ್ಷರು: ಮಾನ್ಯ ವಾಟಾಳ್‌ರವರೆ, ಸಿಂಧ್ಯಾರವರ ಖಾತೆಗೆ ಅದು ಬರದೇ ಇರುವುದರಿಂದ

ಶ್ರೀ ವಾಟಾಳ್ ನಾಗರಾಜು: ಬಿಡಿ ಸಾರ್, ಅಯ್ಯೋ ನೀವೂ ಸರಿ, ಅವರು ಮುನಿಸಿ ಕೊಂಡರೆ ನನಗೇನಾಗಬೇಕು? ಮುನಿಸಿಕೊಂಡರೆ ಕುಳಿತುಕೊಳ್ಳಲಿ. ನನಗೇನಾಗಬೇಕು ಅದು ಕಟ್ಕೊಂಡು? ನಾನು ಹೇಳುವುದನ್ನು ಹೇಳುತ್ತೇನೆ. ಮಾನ್ಯ ಸಿಂಧ್ಯಾರವರೆ, ನೀವು ಉತ್ತರ ಕೊಡುವಾಗ ಹೇಳಿ. ನೀವು ಹೇಳುವುದು ಸರಿಯಿಲ್ಲ. ನೀವು ಮಾತನಾಡುವುದು ಸರಿಯಿಲ್ಲ ಎಂದು ಹೇಳಿ. ನಾನು ಹೇಳುತ್ತೇನೆ ಆಮೇಲೆ ನನಗೆ ಗೊತ್ತಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ರೇಷ್ಮೆ ಇಲಾಖೆ ನನಗೆ ಬರುವುದಿಲ್ಲವೆಂದು ಹೇಳಿದನಷ್ಟೆ .

ಶ್ರೀ ವಾಟಾಳ್ ನಾಗರಾಜ್: ನೋಡಿ, ಇಲ್ಲೇನಿದೆ ಈ ಪುಸ್ತಕದಲ್ಲಿ....

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅರೆರೆ, ಏಕೆ ನೀವು ಸಿಟ್ಟು ಮಾಡಿಕೊಳ್ಳುತ್ತೀರಿ? ಮಾನ್ಯ ಅಧ್ಯಕ್ಷರೆ, ನಾನು ಏನು ಮಾಡಿದ್ದೇನೆ ಎಂಬುದು ಅರ್ಥವಾಗುತ್ತಿಲ್ಲ. ಅಂಥ ಅಪರಾಧ ಏನು ಮಾಡಿದ್ದೇನೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಬಿಡಿ ಮಾನ್ಯ ಸಿಂಧ್ಯಾರವರೆ, ನಿಮ್ಮ ಉತ್ತರ ನನಗೆ ಬೇಕಾಗಿಲ್ಲ. ನಾನು ಇನ್ನು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ನಿಮ್ಮ ಉತ್ತರ ನಾನು ಈಗ ಕೇಳುವುದಕ್ಕೆ ತಯಾರಾಗಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ವಾಟಾಳ್‌ರವರೆ, ತಾವು ವಯಸ್ಸಿನಲ್ಲಿ ಹಿರಿಯರು, ಅನುಭವಸ್ಥರು, ತಾವು ಮುನಿಸಿಕೊಳ್ಳಬಾರದು, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಇಲ್ಲ, ಬೇಕಾಗಿಲ್ಲ. ನೀವು ಈ ರೀತಿ ಮಾಡಿದರೆ ನಾನು ಭಾಷಣವನ್ನೇ ಮುಗಿಸಿ ಹೊರಗೆ ಹೋಗುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಇಲ್ಲಾ ಆ ರೀತಿ ಮಾಡಬೇಡಿ. ತಾವು ಮಾತನಾಡಿ. ನಾನೇ ಈಲ್ಡ್ ಆಗುತ್ತೇನೆ. ನಾನು ನಿಮಗಿಂತ ಅನುಭವದ ವಿಚಾರದಲ್ಲಿ, ವಯಸ್ಸಿನಲ್ಲಿ ಎಲ್ಲಾದರಲ್ಲೂ ಕಿರಿಯವನಾಗಿದ್ದೇನೆ. ತಾವು ಮಾತನಾಡಿ. ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನನಗೆ ಗೊತ್ತಿದೆ. ಅಂಥ ವಿಚಾರಗಳೇನೂ ಇಲ್ಲಿ ಬೇಕಾಗಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಬಹಳ ಪ್ರಾಮಾಣಿಕವಾಗಿ ತಮಗೆ ಹೇಳುತ್ತಿದ್ದೇನೆ. ಈ ಖನಿಜ ಸಂಪತ್ತಿನಲ್ಲಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಎಲ್ಲಾ ಸೇರಿದ್ದಾರೆ. ಅಧಿಕಾರಿಗಳು ಮತ್ತು ರಾಜಕಾರಣಿಗಳಿಬ್ಬರೂ ಖನಿಜಗಳ ದರೋಡೆಯಲ್ಲಿ ಸೇರಿದ್ದಾರೆ. ಇಬ್ಬರೂ ಸೇರಿದ್ದಾರೆ. ಈ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಯಾರೂ ತಯಾರಾಗಿಲ್ಲ. ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾರೂ ತಯಾರಾಗಿಲ್ಲ. ಈ ಬಗ್ಗೆ ತನಿಖೆ ಮಾಡುವುದಕ್ಕೆ ಯಾರೂ ತಯಾರಾಗಿಲ್ಲ. ಎಲ್ಲರೂ ಲೂಟಿಗೆ ಬೆಂಬಲ, ಕೊಟ್ಟು ಲೂಟಿಗೆ ತಯಾರಾಗಿದ್ದಾರೆ. ತಾವು ದಯವಿಟ್ಟು ಬರುವುದಾದರೆ, ಕರ್ನಾಟಕದ ಮೂಲೆ ಮೂಲೆಗಳಲ್ಲಿ ಎಷ್ಟು ನಿಸರ್ಗ ಸಂಪತ್ತು ಲೂಟಿಯಾಗುತ್ತಿದೆ ಎಂಬುದನ್ನು ತೋರಿಸುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಇಡೀ ಬಿಜಾಪುರವೇ ನಾಶವಾಗಿದೆ. ಇಳಕಲ್‌ನಲ್ಲಿ ಒಂದು ಕಾಲದಲ್ಲಿ 'ಇಳಕಲ್ ಸೀರೆ' ಹೆಸರುವಾಸಿಯಾಗಿತ್ತು. ಇಡೀ ಇಳಕಲ್ ಗುಗ್ಗೆಲುವರಿಬಸವೇಶ್ವರ ದೇವಾಸ್ಥಾನಕ್ಕೆ ಸೇರಿದಂಥ ಸಾವಿರಾರು ಎಕರೆ ಭೂಮಿ ಲೂಟಿಯಾಗಿದೆ. ಲೂಟಿ, ಲೂಟಿ, ಎಲ್ಲಾ ಕಡೆ ಒಂದಲ್ಲ, ಎರಡಲ್ಲ, ದೇವಾಸ್ಥಾನಗಳನ್ನು ಬಿಟ್ಟಿಲ್ಲ. ಧಾರ್ಮಿಕ ಪೀಠ ಬಿಟ್ಟಿಲ್ಲ. ಪರ್ವತಗಳನ್ನು ಬಿಟ್ಟಿಲ್ಲ. ಬೆಟ್ಟಗಳನ್ನೂ ಬಿಟ್ಟಿಲ್ಲ. ಎಲ್ಲವನ್ನೂ ಲೂಟಿ ಮಾಡಿದ್ದಾರೆ. ಎಲ್ಲ ಲೂಟಿ, ಕರಗಿಸಿಬಿಟ್ಟಿದ್ದಾರೆ. ಇದರ ಬಗ್ಗೆ ಯಾರೂ ತಯಾರಾಗಿಲ್ಲ. ಯಾವ ಸರ್ಕಾರವೂ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ತಯಾರಾಗಿಲ್ಲ. ಕಾರಣ ಏನು? ಎಲ್ಲರೂ

ಖೈದಿಗಳೇ. ಎಲ್ಲರೂ ಅಪರಾಧಿಗಳೇ. ಎಲ್ಲರೂ ಇದರಲ್ಲಿ ಪಾಲುದಾರರೇ, ಅದಕ್ಕೆ ಬೇರೆ ಮಾತೇನಿಲ್ಲ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಎಲ್ಲರೂ ಖೈದಿಗಳೇ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯವಿಟ್ಟು ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್: ಯಾರು ಯಾರು ಭಾಗಿಗಳಾಗಿದ್ದಾರೆ ಅವರೆಲ್ಲರೂ ಖೈದಿಗಳೇ. ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ ಈ ನೂತನ ವಿದ್ಯುತ್ ಕಾರ್ಖಾನೆ ಬಗ್ಗೆ ಹೇಳಬಯಸುತ್ತೇನೆ. ಈ ನೂತನ ವಿದ್ಯುತ್ ಕಾರ್ಖಾನೆ ಆರಂಭವಾದಾಗ ಬಹಳ ಆದರ್ಶವಾಗಿಯೇ ಆರಂಭವಾಯಿತು. ನೂತನ ವಿದ್ಯುತ್ ಕಾರ್ಖಾನೆ ಆದರ್ಶವಾಗಿ ಆರಂಭವಾಯಿತು. ಸಚ್ಚಿದಾನಂದಮೂರ್ತಿ ಎಂದು ಹೇಳಿ ಆ ಕಾಲದಲ್ಲಿ ಐ.ಎ.ಎಸ್.ಅಧಿಕಾರಿ ಆ ಒಂದು ಕಾರ್ಖಾನೆಯನ್ನು ಬೆಳೆಸುವುದಕ್ಕೆ ಬಹಳ ಪ್ರಾಮಾಣಿಕವಾಗಿ ದುಡಿದರು. ಅಲ್ಲಿ ಕೆಲಸಗಾರರು ಯಾರು ನೂರಕ್ಕೆ ನೂರರಷ್ಟು ಅಚ್ಚು ಕನ್ನಡಿಗರೇ ಆಗಿದ್ದರು. ಕಾರ್ಖಾನೆ ಏನಾಯಿತು? ಇವೊತ್ತು ನಾಶವಾಯಿತು. ಸಂಪೂರ್ಣ ಮುಚ್ಚಿಹೋಯಿತು. ಕಾರ್ಮಿಕರು ಬೀದಿಪಾಲಾದರು. ಆ ಜಮೀನನ್ನು ಕಡಿಮೆ ದರದಲ್ಲಿ ಒಂದು ಚದರ ಅಡಿಗೆ ಒಂದು ಸಾವಿರ ರೂಪಾಯಿಗೆ ಹೋಗತಕ್ಕಂಥ ಜಮೀನನ್ನು ಇನ್ನೂರು ರೂಪಾಯಿಯಂತೆ ಹರಾಜು, ರಣಹದ್ದಿನ ರೀತಿ ನೂತನ ವಿದ್ಯುತ್ ಕಾರ್ಖಾನೆಯನ್ನು ತಿಂದಿದ್ದಾರೆ, ತಿನ್ನುತಿದ್ದಾರೆ. ಮಾನ್ಯ ಸಿಂಧ್ಯಾರವರು ಹೇಳುತ್ತಿದ್ದಾರೆ. ಈಗ ಸರ್ವೋಚ್ಚ ನ್ಯಾಯಾಲಯಕ್ಕೆ ನಾವು ಅರ್ಜಿ ಹಾಕಿದ್ದೇವೆ. ಅದನ್ನು ಉಳಿಸುತ್ತೇವೆ. ಮಾಡುತ್ತೇವೆ ಎಂದು ಹೇಳಿ ಬರೀ ಘೋಷಣೆ ಹೇಳುತ್ತಿದ್ದಾರೆ. ಇವರ ಕೈಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಇವರು ಬರೇ ಮಾತನಾಡುತ್ತಿದ್ದಾರೆ. ಇವರು ಹೇಳುವುದನ್ನು ಖಂಡಿತಾ ನಾನು ಒಪ್ಪುವುದಿಲ್ಲ. ನೂತನ ವಿದ್ಯುತ್ ಕಾರ್ಖಾನೆಯ ಒಳಗಡೆ ಎಂಥಂಥ ಯಂತ್ರಗಳು ಇವೆ. ವಿದೇಶದ ಬೇಡಿಕೆ ಎಷ್ಟಿತ್ತು. ಅಪಾರವಾದ ಬೇಡಿಕೆ ಇತ್ತು. ಆ ಬೇಡಿಕೆಯನ್ನು ಮೂಲೆಗುಂಪು ಮಾಡಿ ಇವೊತ್ತು ಅದನ್ನು ಮುಚ್ಚಿದ್ದಾರೆ. ಕಡೆಗಣಿಸಿದ್ದಾರೆ. ಮೈಸೂರು ಲ್ಯಾಂಪನ್ನು ಅದೇ ತರಹ ಮುಚ್ಚುವುದಕ್ಕೆ ಹೊರಟಿದ್ದಾರೆ. ಕೊನೆಯದಾಗಿ ಅಧ್ಯಕ್ಷರೆ, ಈ ಸರೋಜಿನಿ ಮಹಿಷಿ ವರದಿ, ಇದು ಬರೇ ಬುರುಡೇ. ಈ ಸರ್ಕಾರ ಬರೇ ಬುರುಡೆ. ಬರೇ ಮಾತು. ಜನರನ್ನು ಮೋಸ ಮಾಡುತ್ತಿದ್ದಾರೆ. ಕನ್ನಡಿಗರಿಗೆ ಅನ್ಯಾಯ ಮಾಡುತ್ತಿದ್ದಾರೆ. ಕನ್ನಡಿಗರಿಗೆ ದ್ರೋಹ ಮಾಡುತ್ತಿದ್ದಾರೆ. ಇವರು ಪಾಪ ಮಾಡುತ್ತಿದ್ದಾರೆ. ಸರೋಜಿನಿ ಮಹಿಷಿ ವರದಿಯನ್ನು ಕೊಟ್ಟು ಸುಮಾರು ಎರಡೂವರೆ ದಶಕಗಳ ಮೇಲಿಯೇ ಆಯಿತು.

ಏನು ಮಾಡುತ್ತಿದ್ದೀರಿ? ಅದರಲ್ಲಿ ಏನಿದೆ, 15 ವರ್ಷ ರಾಜ್ಯದಲ್ಲಿರತಕ್ಕಂಥವರು ಕನ್ನಡಿಗರು ಎಂದು ಇದೆ. ಆದರೆ ಈಗ ಆ ರೀತಿ ಹೇಳುವುದಕ್ಕೆ ಬರುವುದಿಲ್ಲ. ಈಗ ಕನಿಷ್ಠ 30 ವರ್ಷ ಎಂದು ಹಾಕಬೇಕು. ಈಗ 15 ವರ್ಷವೆಂದರೆ, ಬೆಂಗಳೂರಿನಲ್ಲಿ 45 ಲಕ್ಷ ಜನ ಹೊರಗಡೆಯಿಂದ ಬಂದಿದ್ದಾರೆ ಒಟ್ಟು 30 ವರ್ಷದಿಂದ ಇರುವವರು ಎಂದು ಮಾಡಿ. ಇಲ್ಲವೆಂದರೆ ಮಣ್ಣಿನ ಮಕ್ಕಳು ಎಂದು ಇದಕ್ಕೆ ತಿದ್ದುಪಡಿಯಾಗಲಿ ಸುಮ್ಮನೆ ಬುರುಡೆ ಹೊಡೆಯುವುದು ಬೇಡ, ಮಾತನಾಡುವುದು ಬೇಡ, ಯಾರಿಗೂ ಹೇಳುವುದೇನೂ ಬೇಡ. ಸರೋಜಿನಿ ಮಹಿಷಿ ವರದಿ ಒಂದು ಅಕ್ಷರ ಜಾರಿಯಾಗಿಲ್ಲ. ಈಗ ನಾವು ಕೇಳುತ್ತಿದ್ದೇವೆ. ಸರೋಜಿನಿ ಮಹಿಷಿ ವರದಿ ಜಾರಿಗಾಗಿ ಇಡೀ ರಾಜ್ಯಾದ್ಯಂತ ನಿಮ್ಮ ಸರ್ಕಾರದ ವಿರುದ್ಧ ಸಮರವನ್ನೇ ಘೋಷಣೆ ಮಾಡುತ್ತೇವೆ. ನೀವು ಕನ್ನಡಿಗರಿಗೆ ಉದ್ಯೋಗ ಕೊಡುವುದಕ್ಕಾಗಿಲ್ಲ. ಕನ್ನಡಿಗರಿಗೆ ಉದ್ಯೋಗ ಕೊಟ್ಟಿಲ್ಲ. ಕರ್ನಾಟಕದಲ್ಲಿ ಇರುವಂತಹ ಯಾವ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಇಲ್ಲ. ಬೆಂಗಳೂರಿಗೆ ಜನ ಏಕೆ ಬರುತ್ತಿದ್ದಾರೆ? ಇಲ್ಲಿ ಧಾರಾಳವಾಗಿ ಕೆಲಸ ಸಿಗುತ್ತಿದೆ ಎಂದು. ಈಗ ನಾಗಮಂಗಲದವರಿಗೆ ಇಲ್ಲಿ ಕೆಲಸ ಇಲ್ಲ; ಕುಣಿಗಲ್‌ನವರಿಗೆ ಇಲ್ಲಿ ಕೆಲಸ ಇಲ್ಲ. ಮೈಸೂರಿನವರಿಗೆ ಇಲ್ಲಿ ಕೆಲಸ ಇಲ್ಲ. ಆದರೆ ಇಲ್ಲಿ ತಮಿಳುನಾಡಿನವರಿಗೆ ಧಾರಾಳವಾಗಿ ಕೆಲಸ ಸಿಗುತ್ತದೆ. ಅಂಧ್ರದವರಿಗೆ ಧಾರಾಳವಾಗಿ ಕೆಲಸ ಸಿಗುತ್ತದೆ. ಕೇರಳದವರಿಗೆ ಧಾರಾಳವಾಗಿ ಕೆಲಸ ಸಿಗುತ್ತದೆ. ಬಿಹಾರ್‌ನವರಿಗೆ ಕೆಲಸ ಸಿಗುತ್ತದೆ. ನಮ್ಮ ಕರ್ನಾಟಕಕ್ಕೆ 2 ಕೋಟಿ ಜನ ಹೊರಗಡೆಯಿಂದ ಬಂದಿದ್ದಾರೆ. ಅದು 1956 ರಿಂದ ಇಲ್ಲಿಯವರೆಗೆ 2 ಕೋಟಿ ಜನ ಪರಭಾಷೆಯವರು ಬಂದಿದ್ದಾರೆ. ನಮ್ಮಲ್ಲಿ ವಲಸೆ ತಡೆಯುವುದಕ್ಕೆ ವ್ಯವಸ್ಥೆ ಇಲ್ಲ. ಬೇರೆ ರಾಜ್ಯಗಳಿಗೆ ಎಲ್ಲೂ ಇಷ್ಟೊಂದು ಜನ ಕನ್ನಡಿಗರು ವಲಸೆ ಹೋಗಿಲ್ಲ. ಮಾನ್ಯ ಅಧ್ಯಕ್ಷರೆ, ಗೋವಾದ ವಿಚಾರದಲ್ಲಿ ನಾನು ಮಾತನಾಡುವುದಕ್ಕೆ ತಮಗೆ ಅವಕಾಶವನ್ನು ಕೇಳಿದ್ದೇನೆ. ಅದರ ಬಗ್ಗೆ ನಂತರ ಮಾತನಾಡುತ್ತೇನೆ. ಗೋವಾದಲ್ಲಿ ಕನ್ನಡಿಗರ ದುರಂತ, ಅಲ್ಲಿ ವಿಷ ಹಾಕುವುದು ಒಂದು ಬಾಕಿ ಇದೆ. ಅದರ ಬಗ್ಗೆ 2 ಪುಟದಲ್ಲಿ ಎರಡು ಸಾರಿ ಕನ್ನಡ ಪ್ರಭ ಪ್ರತಿಕೆಯಲ್ಲಿ ಬಂತು. ಅದರ ಬಗ್ಗೆ ಅವಕಾಶವನ್ನು ತಮಗೆ ಕೇಳಿದ್ದು, ನಂತರ ಆ ವಿಚಾರ ನಾನು ಮಾತನಾಡುತ್ತೇನೆ. ನಾನು ಹೇಳುತ್ತಿದ್ದೇನೆ. ಈ ಸರೋಜಿನಿ ಮಹಿಷಿ ವರದಿಯನ್ನು ಮೂಲೆಗುಂಪು ಮಾಡಿದ್ದಾರೆ. ಇವರು ತಮ್ಮ ಪುಸ್ತಕದಲ್ಲಿ ಬರೀ ಮಾತು ಹರಿಕಥೆ ಹಾಗೂ ವೇದಾಂತ ಹೇಳಿದ್ದಾರೆಯೇ ಹೊರತು ಯಾವತ್ತು ಸರೋಜಿನಿ ಮಹಿಷಿ ವರದಿ ಬಗ್ಗೆ ಒಂದು ರೀತಿಯಲ್ಲಿ ಸತ್ಯಕ್ಕೆ ದೂರವಾದ ಮಾತನ್ನು ಈ ನಾಡಿನ ಜನತೆಯ ಮುಂದೆ ಹೇಳುತ್ತಾ

ಬಂದಿದ್ದಾರೆಯೇ ಹೊರತು, ಸರೋಜಿನಿ ಮಹಿಷಿ ವರದಿಯನ್ನು ಜಾರಿ ಮಾಡುವುದರ ಬಗ್ಗೆ ಇವರಿಗೆ ಪ್ರಾಮಾಣಿಕತೆ, ನೈತಿಕತೆ ಇಲ್ಲ ಮತ್ತು ಕನ್ನಡಿಗರ ಬಗ್ಗೆ ಅಭಿಮಾನ ಇಲ್ಲವೆಂದು ಹೇಳುತ್ತಾ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಸಹಕಾರ ಸಂಘಗಳಲ್ಲಿ ಮೀಸಲಾತಿ ಜಾರಿಗೆ ತರುವ ಬಗ್ಗೆ ಹಾಗೂ ಬೇಡಿಕೆಗಳ ಮೇಲೆ ಮಾತನಾಡಲು ಹೆಚ್ಚು ಅವಕಾಶ ನೀಡುವ ಬಗ್ಗೆ.

ಶ್ರೀ ರಾಜೇಂದ್ರವರ್ಮ: ಮಾನ್ಯ ಅಧ್ಯಕ್ಷರೆ, ಸಹಕಾರ ಸಂಘದಲ್ಲಿ ಒಂದು ಮಾತು ನಮಗೆ ತಿಳಿಯುತ್ತಿಲ್ಲ. ಇವತ್ತು ಗ್ರಾಮಪಂಚಾಯ್ತಿಯಲ್ಲಿ, ಜಿಲ್ಲಾ ಪಂಚಾಯ್ತಿಯಲ್ಲಿ ತಾಲ್ಲೂಕು ಪಂಚಾಯ್ತಿಯಲ್ಲಿ ಎಸ್‌ಸಿ ರಿಸರ್ವೇಷನ್ ಅಳವಡಿಸಿದ್ದಾರೆ. ಆದರೆ ಈ ಸಹಕಾರ ಸಂಘದಲ್ಲಿ ಅದನ್ನು ಅಳವಡಿಸಿದ್ದಾರೋ ಇಲ್ಲವೋ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಏಕೆಂದರೆ ಎಲ್ಲಾ ಕಡೆ ಕೂಡ ಎಲ್ಲಾ ಸ್ಥಾನಗಳಲ್ಲಿ ರಿಸರ್ವೇಷನ್ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಏಕೆ ಇಲ್ಲ ಎನ್ನುವುದು ಬಹಳ ದೊಡ್ಡ ಸಮಸ್ಯೆ ದಲಿತರಿಗೆ ಕಾಡುತ್ತಿದೆ. ಅದಕ್ಕೋಸ್ಕರ ಸಹಕಾರ ಸಂಘದಲ್ಲಿ ಇಲ್ಲವೆಂದು ಹೇಳಿದರೆ ಅದನ್ನು ಮುಂದೆ ಬರುವಂತಹ ದಿನಗಳಲ್ಲಿ ಅಳವಡಿಸಬೇಕೆಂಬುದು ನನ್ನ ವಾದ. ರಿಸರ್ವೇಷನ್ ಕೊಡಬೇಕು ಆ ಸಹಕಾರ ರಂಗದಲ್ಲಿ ಎನ್ನುವುದು ನನ್ನ ಭಾವನೆ.

ಶ್ರೀ ಹೆಚ್.ಡಿ.ಬಸವರಾಜ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಈ ಸಹಕಾರ ಸಂಘದಲ್ಲಿ ವಿಚಾರದಲ್ಲಿ ಹೇಳುತ್ತಿದ್ದಾರೆ. ಅದೇರೀತಿ ಮೀಸಲಾತಿಯನ್ನು ಇವತ್ತು ಎಪಿಎಂಸಿ ನಲ್ಲಿ ಕೂಡ ಇಲ್ಲ. ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿನಲ್ಲಿ ಮೀಸಲಾತಿ ಇದೆ. ಇವರು ಎಪಿಎಂಸಿಯನ್ನು ಏಕೆ ಹೊರತುಪಡಿಸಿದ್ದಾರೆ? ಅಲ್ಲಿ ಅವರಿಗೆ ಅವಕಾಶ ಸಿಗುವುದು ಬೇಡ ಎಂದೇ? ಸರ್ಕಾರ ಎಪಿಎಂಸಿ ಯಲ್ಲಿ ಕೂಡ ಮೀಸಲಾತಿಯನ್ನು ತಂದು.......

(ಗೊಂದಲ)

ಅಧ್ಯಕ್ಷರು: ಆಯಿತು, ಈಗ ಅನೇಕ ಜನ ಮಾತನಾಡಿದಾಗ ಆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೆ, ಮತ್ತೆ ನೀವು ನಿಂತುಕೊಂಡು ಏತಕ್ಕೆ ಮಾತನಾಡುತ್ತೀರಿ? ತಮ್ಮ ಭಾಷಣಗಳಲ್ಲಿ ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೇ ಏಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ ಎಪಿಎಂಸಿ ನಲ್ಲಿ ಕೂಡ ಈ ಒಂದು ಮೀಸಲಾತಿ ಇಲ್ಲ.